# 1. ಓದುವುದು ಎಂದರೆ ಏನು ??!

ಕೆಲವು ಅಕ್ಷರಗಳನ್ನು ಸೇರಿಸಿಕೊಂಡು ಪದಗಳನ್ನು ಉಚ್ಚರಿಸಿದರೆ ಅದನ್ನು 'ಓದುವುದು' ಎನ್ನಬಹುದೇ ? 'ಓದುವುದು' ಎಂದರೆ ಇಷ್ಟು ಮಾತ್ರವಲ್ಲ; ಯಾವುದೇ ವಿಷಯವನ್ನು ಓದಿ ಅದನ್ನು ತಮ್ಮ ಅನುಭವದೊಂದಿಗೆ ಹೋಲಿಸಿಕೊಂಡು ಅರ್ಥಮಾಡಿಕೊಳ್ಳುವುದನ್ನು 'ಓದುವುದು' ಎನ್ನುತ್ತಾರೆ.

ಸರಾಗವಾಗಿ ಅಡೆ-ತಡೆಯಿಲ್ಲದೆ ವಾಕ್ಯ/ಪ್ಯಾರಾ/ಕಥೆಗಳನ್ನು **'ನಿರರ್ಗಳವಾಗಿ ಓದುವುದು' (Fluent reading)** ಒಂದು ಮಟ್ಟದ 'ವಾಚನ ಕಲಿಕೆ'ಯಾಗುತ್ತದೆ. ಆದರೆ ಓದಿದ ವಿಷಯವನ್ನು ಅರ್ಥೈಸಿ ತನ್ನ ಅರಿವಿಗೆ ತಂದುಕೊಳ್ಳುವ 'ಅರ್ಥಪೂರ್ಣ ಓದು' **(Reading with Comprehension)** ನಿಜವಾದ ಓದು ಎಂದೆನಿಸಿಕೊಳ್ಳುತ್ತದೆ. ಆದರೆ ಮಗು ಮೊದಲು ಲಿಖಿತ ಭಾಷೆಯನ್ನು ಓದಲು ಕಲಿತು ನಂತರ ವಿಷಯವನ್ನು ಅರ್ಥಮಾಡಿಕೊಳ್ಳಬಹುದು ಎಂದು ಹೇಳಲಾಗದು. ಮಕ್ಕಳು ಸರಾಗವಾಗಿ ಉಚ್ಚಾರಣಾ ದೋಷಗಳಿಲ್ಲದೆ ನಿರರ್ಗಳವಾಗಿ ಓದುವುದರ ಜೊತೆ ಜೊತೆಗೆ ವಿಷಯವನ್ನು ಅರ್ಥಮಾಡಿಕೊಂಡು ಓದಲು ಕಲಿಯಬಹುದು.
ಹೀಗೆ 'ನಿರರ್ಗಳ ಓದಿನೊಂದಿಗೆ ಅರ್ಥಗ್ರಹಿಕೆಯ ಓದು' ಕಲಿಸುವುದೇ ಈ ಕಾರ್ಯಕ್ರಮದ ಪ್ರಧಾನ ಗುರಿ.

ನಮ್ಮ ಶಾಲೆಗಳ ಪ್ರತಿ ವಿದ್ಯಾರ್ಥಿಯ 'ಓದುವ' ಮಟ್ಟ ಆಯಾ ತರಗತಿಯ ಮಟ್ಟಕ್ಕೆ ಅನುಗುಣವಾಗಿದೆಯೇ? ಬಹುಶಃ ಇಲ್ಲ. ಸಾಮಾನ್ಯವಾಗಿ ನಾಲ್ಕು ಮತ್ತು ಐದನೇ ತರಗತಿಗಳಲ್ಲಿ ಕೆಲವೇ ಮಕ್ಕಳಲ್ಲಿ ವಾಚನ ಕೌಶಲವಿದ್ದರೂ ಬಹಳಷ್ಟು ಮಕ್ಕಳು ಕಥೆ/ಪಾಠಗಳನ್ನು ಅರ್ಥಮಾಡಿಕೊಂಡು, ತೃಪ್ತಿಕರ ವೇಗದಲ್ಲಿ ತಪ್ಪಿಲ್ಲದೆ ಓದಲು ಸಮರ್ಥರಿಲ್ಲ. ಈ ಸಮಸ್ಯೆಗೆ ಪರಿಹಾರವಿದೆ.

**"ಸರಳ ಕನ್ನಡದ ವಿವಿಧ ಕಥೆಗಳನ್ನು ಓದಲು ಕಲಿಸುವ ಮಾದರಿ"**ಯು ಈ ಕಾರ್ಯಕ್ರಮದಲ್ಲಿ ನೀಡಿರುವ ಸಾಮಗ್ರಿ-ಚಟುವಟಿಕೆಗಳನ್ನು ನಿರ್ದಿಷ್ಟ ಅವಧಿಗಳಲ್ಲಿ ಕೇಂದ್ರೀಕರಿಸಿ ಅಳವಡಿಸಿದಲ್ಲಿ ಮಕ್ಕಳಿಗೆ ಅರ್ಥಪೂರ್ಣ ಓದು-ಬರಹ ಕಲಿಯುವ ಸಾಧ್ಯತೆಯಿದೆ. ಪ್ರತಿ ಮಗುವಿನ ವಾಚನ-ಬರಹದ ಮಟ್ಟಕ್ಕೆ ಅನುಗುಣವಾಗಿ, ಅವರ ಕಲಿಯುವ ವೇಗಕ್ಕೆ ಸೂಕ್ತವಾದ ಚಟುವಟಿಕೆಯ ಆಯ್ಕೆ-ಅಳವಡಿಕೆ ಅತ್ಯಾವಶ್ಯಕ. ತರಗತಿಗಳನ್ನು ನಡೆಸುವಾಗ ಪೂರ್ಣ ಸಿದ್ಧತೆಯಿಂದ ನಡೆಸುವಿರೆಂಬ ಭರವಸೆ ಇದೆ; ಮಕ್ಕಳ ಕನ್ನಡ ಓದು-ಬರಹದ ಕಲಿಕೆಗೆ ತಾವೆಲ್ಲ ಆಸಕ್ತಿ ವಹಿಸಿ ಈ ಕಾರ್ಯಕ್ರಮವನ್ನು ಫಲಪ್ರದವಾಗಿ ಅಳವಡಿಸುತ್ತೀರೆಂಬ ನಂಬಿಕೆ ನಮಗಿದೆ.

## ಕಥೆಯನ್ನು ಏಕೆ ಓದಬೇಕು?

- ಮಕ್ಕಳನ್ನು ಓದುವ ಕಡೆ ಆಕರ್ಷಿಸಲು ಕಥೆ ಓದಿ ಹೇಳುವುದು ಒಂದು ಆಸಕ್ತಿಕರ ವಿಧಾನ.
- ಎಲ್ಲಾ ಮಟ್ಟದ ಮಕ್ಕಳಿಗೂ ಇದು ಸಹಾಯಕಾರಿ.
- ಕಥೆ ಓದುವುದರಿಂದ ಅದನ್ನು ಅರ್ಥಮಾಡಿಕೊಳ್ಳುವ ಅಗತ್ಯವಿದೆ ಎಂಬ ಅರಿವುಂಟಾಗುತ್ತದೆ.
- 'ಅರ್ಥಪೂರ್ಣ' ಓದಿನ ವಿಕಾಸಕ್ಕೆ ಇದು ಸುಲಭದ ದಾರಿ.
- ಯಾವುದೇ ಮಟ್ಟದ ಮಗುವಿಗೆ ಪುಸ್ತಕ ಪರಿಚಯ ಉಂಟಾಗುತ್ತದೆ.
- ಲಿಖಿತ ಭಾಷೆಯ ಮಾದರಿಯಲ್ಲಿ ಅರ್ಥಮಾಡಿಕೊಳ್ಳಲು ನೆರವಾಗುತ್ತದೆ.
- ಪದಗಳನ್ನು ವೇಗವಾಗಿ ಜೋಡಿಸಿ-ಬಿಡಿಸಿ ಓದಬಲ್ಲ ಕ್ಷಮತೆ ವಿಕಾಸವಾಗಲು ಪ್ರಾರಂಭವಾಗುತ್ತದೆ.
- ಕಥೆಯಲ್ಲಿ 'ಮುಂದೇನಾಗುತ್ತದೆ?' ಎಂಬ ಕುತೂಹಲದಿಂದ ಕಥೆಯ ಕೊನೆಯವರೆಗೂ ಓದುವ ಆಸಕ್ತಿ ಉಳಿಯುತ್ತದೆ.
- ಕೆಲವು ಪದಗಳನ್ನು ಓದಲು ತಡವರಿಸಿದರೂ ಕಥೆಯೊಳಗಿನ ಆಸಕ್ತಿ, ಮುಂದೆ ಮುಂದೆ ಓದಿಸಿಕೊಂಡು ಹೋಗುತ್ತದೆ.
- ಕಥೆಗಳಲ್ಲಿ ಕನಸುಂಟು, ಪ್ರಾಣಿಗಳೊಡನೆ ಸಂಭಾಷಣೆಯುಂಟು, ಹೆದರಿಕೆ-ಭಯ ನೀಗುವ ಸನ್ನಿವೇಶಗಳುಂಟು, ಹಾಸ್ಯ, ನಗು-ಅಳು, ಗೆಳೆಯರ ಗೇಲಿ..... ಎಲ್ಲವೂ ಉಂಟು!
- ಕಥೆ ಓದುವುದರಲ್ಲಿ ತಲ್ಲೀನರಾದರೆ ಮಕ್ಕಳಿಗೆ ಕಲ್ಪನಾಲೋಕದಲ್ಲಿ ವಿಹರಿಸಿದಂತೆ!!

**ಒಟ್ಟಿನಲ್ಲಿ ಕಥೆಯ ಓದಿನಿಂದ ಒಂದು ವಿಶಿಷ್ಟ ಆನಂದ ಸಿಗುತ್ತದೆ**

## ಗುರಿಗಳು

- ಕಾರ್ಯಕ್ರಮದ ಕೊನೆಯಲ್ಲಿ ಪ್ರತಿ ಮಗುವಿಗೆ ಸರಳ ಪಠ್ಯ ಓದುವಿಕೆ ಮತ್ತು ಅರ್ಥಗ್ರಹಿಕೆ ಸಾಧ್ಯತೆ.
- ಪ್ರತಿ ಮಗುವು ಮೌಖಿಕ ಮತ್ತು ಲಿಖಿತ ರೂಪದಲ್ಲಿ ತನ್ನ ಸ್ವಂತ ಭಾವನೆಯನ್ನು ವ್ಯಕ್ತಪಡಿಸುವ ಸಾಧ್ಯತೆ.

## 2. ಕಾರ್ಯಕ್ರಮದ ವಿಧಾನ

**ಕಾರ್ಯಕ್ರಮವನ್ನು ಹಂತ ಹಂತವಾಗಿ ಅಳವಡಿಸುವ ವಿಧಾನ**

**ಪ್ರತಿ ಮಗುವಿನ ವಾಚನ ಮಟ್ಟ ಗುರುತಿಸುವಿಕೆ – ಪ್ರಾರಂಭಿಕ/ಅಕ್ಷರ/ಪದ/ಪ್ಯಾರಾ/ಕಥಾಮಟ್ಟ**

**ವಾಚನ ಮಟ್ಟಕ್ಕೆ ಅನುಗುಣವಾಗಿ ಗುಂಪುರಚನೆ – ದೊಡ್ಡ ಗುಂಪು / ಚಿಕ್ಕ ಗುಂಪು/ ವ್ಯಕ್ತಿಗತ**

**1. ಆರಂಭಿಕ ಹಂತ**
**Basic Level – ಸರಳ ಕನ್ನಡ ಭಾಗ 1**
ಪ್ರಾರಂಭಿಕ, ಅಕ್ಷರ ಮತ್ತು ಪದಮಟ್ಟದ ಮಕ್ಕಳಿಗಾಗಿ
ದೊಡ್ಡ ಮತ್ತು ಚಿಕ್ಕಗುಂಪಿನಲ್ಲಿ
ಸೂಕ್ತ ಆಟ–ಚಟುವಟಿಕೆಗಳ ಅಳವಡಿಕೆ.
ಅಭ್ಯಾಸ ಪುಸ್ತಕ ಮಟ್ಟ – 1

**2. ಮುಂದುವರೆದ ಹಂತ**
**Advance Level – ಸರಳ ಕನ್ನಡ ಭಾಗ –2**
ಪ್ಯಾರಾ ಮತ್ತು ಕಥಾಮಟ್ಟದ ಮಕ್ಕಳಿಗಾಗಿ
ದೊಡ್ಡ ಮತ್ತು ಚಿಕ್ಕ ಗುಂಪಿನಲ್ಲಿ
ವಿಶೇಷ ಆಟ ಚಟುವಟಿಕೆಗಳ ಅಳವಡಿಕೆ
ಅಭ್ಯಾಸ ಪುಸ್ತಕ ಮಟ್ಟ–2

ವಾಚನ ಮಟ್ಟಕ್ಕೆ ಹೊಂದಿಸಿ 'ಬರಹ ಕೌಶಲ' ವಿಕಾಸಕ್ಕೆ ಮೊದಲ ಹಂತ ಮತ್ತು ಮುಂದುವರೆದ ಹಂತ
ಎರಡಕ್ಕೂ ವಿಶೇಷ ಚಟುವಟಿಕೆಗಳು– ಅಭ್ಯಾಸ ಪುಸ್ತಕ ಮಟ್ಟ 1 & 2
ಓದಿದ ವಿಷಯದ ಬಗ್ಗೆ ಬರೆಯುವ 'ಸ್ವಯಂ ಲೇಖನ' ಕ್ಕಾಗಿ ಅಭ್ಯಾಸ.

ಎಲ್ಲಾ ಚಟುವಟಿಕೆಗಳಲ್ಲೂ ಭಾಷಾ ಕೌಶಲಗಳ ಸಂಯೋಜನೆಗೆ ಒತ್ತು.
ಪ್ರತಿ ಮಗುವಿಗೂ ಸ್ವಯಂ ವಾಚನ – ಸ್ವಯಂ ಲೇಖನ ಸಾಮರ್ಥ್ಯ ಬೆಳೆಸಿಕೊಳ್ಳುವ ಅವಕಾಶ

ಭಾಷಾ ಕೌಶಲಗಳು

1. ಆಲಿಸುವಿಕೆ **(Listening)**
2. ಮಾತನಾಡುವಿಕೆ **(Speaking)**
3. ಓದುವಿಕೆ **(Reading)**
4. ಬರೆಯುವಿಕೆ **(Writing)**

ಅರ್ಥೈಸುವಿಕೆ **(Comprehension)** — 1, 3
ಅಭಿವ್ಯಕ್ತಗೊಳಿಸುವಿಕೆ **(Expression)** — 2, 4

# 3. ತರಗತಿಯ ಸಂಚಾಲನೆ

ಗುಂಪು ರಚನೆ :-

ತರಗತಿ ಪ್ರಾರಂಭಿಸುವ ಮೊದಲು ಎಲ್ಲ ಮಕ್ಕಳ ಪರೀಕ್ಷೆ ನಡೆಸುತ್ತೇವೆ. ಇದರಿಂದ ಬೇರೆ ಬೇರೆ ಮಟ್ಟದ ಮಕ್ಕಳ ಗುಂಪನ್ನು ನಿರ್ಮಿಸಲಾಗುತ್ತದೆ. ಆದ್ದರಿಂದ ಆ ಮಕ್ಕಳೊಂದಿಗೆ ತರಗತಿಯನ್ನು ಹೇಗೆ ನಡೆಸಬೇಕು ಮತ್ತು ಯಾವ ಯಾವ ವಿಷಯಗಳನ್ನು ಗಮನದಲ್ಲಿ ಇರಿಸಿದರೆ ಮಕ್ಕಳಲ್ಲಿ ನಿಶ್ಚಯವಾಗಿ ಕಲಿಕೆ ಉಂಟಾಗುತ್ತದೆ ಎಂಬ ಅಂಶಗಳು ನೆನಪಿರಲಿ. ಚಟುವಟಿಕೆಗಳಿಗೆ ಅನುಸಾರವಾಗಿ ದೊಡ್ಡ ಇಲ್ಲವೇ ಸಣ್ಣ ಗುಂಪಿನೊಂದಿಗೆ ಕೆಲಸ ಮಾಡಿ.

ಗುಂಪಿನಲ್ಲಿ ಸಹಭಾಗಿತ್ವ :-

ಗುಂಪಿನ ಕಾರ್ಯ ಎಂದರೆ ಯಾವುದೇ ಕೆಲಸವನ್ನು ಮಾಡಲು ಮಕ್ಕಳು ಸಣ್ಣ ಸಣ್ಣ ಗುಂಪು ಮಾಡಿಕೊಂಡು ಆ ಕಾರ್ಯವನ್ನು ಕೇವಲ ಪೂರ್ಣಗೊಳಿಸುವುದಷ್ಟೇ ಅಲ್ಲ, ಮಕ್ಕಳು ಸಣ್ಣ ಸಣ್ಣ ಗುಂಪಿನಲ್ಲಿ ಯಾವುದೇ ವಿಷಯದ ಬಗ್ಗೆ ಒಟ್ಟಾಗಿ ಸೇರಿ ಚರ್ಚೆ ಮಾಡುವುದು ಮತ್ತು ಪರಸ್ಪರ ಸಹಕಾರದೊಂದಿಗೆ ಕಾರ್ಯವನ್ನು ಪೂರ್ಣಗೊಳಿಸುವುದು. ಈ ಕಾರ್ಯವನ್ನು ಪೂರ್ಣಗೊಳಿಸುವುದರಲ್ಲಿ ಗುಂಪಿನ ಪ್ರತಿಯೊಬ್ಬರೂ ಕೇವಲ ಸಹಭಾಗಿಗಳು ಮಾತ್ರವಾಗಿರದೆ ಆ ಕಾರ್ಯ ಪೂರ್ಣಗೊಳ್ಳುವುದರಲ್ಲಿ ಅವರ ಪಾತ್ರವೂ ಇದ್ದು ಅವರವರ ಕಾರ್ಯ ನಿಶ್ಚಿತವಾಗಬೇಕು ಇದಿಷ್ಟು ಗುಂಪಿನ ಕಾರ್ಯ ಉದ್ದೇಶಗಳಾಗಿವೆ. ಬೇರೆ ಬೇರೆ ಚಟುವಟಿಕೆಗಳಲ್ಲಿ ಬೇರೆ ಬೇರೆ ಮಕ್ಕಳ ಜವಾಬ್ದಾರಿ ಇರಬೇಕು. ಅಲ್ಲದೆ ಈ ನಿರ್ಣಯ ಸ್ವತಃ ಅವರಿಂದಲೇ ಆಗಬೇಕು. ಆದ್ದರಿಂದ ಗುಂಪು ಕಾರ್ಯ ನಡೆಯುವಾಗ

- ಎಲ್ಲರ ಸಹಭಾಗಿತ್ವ ಇರಬೇಕು ಮತ್ತು ಕಾರ್ಯಗಳ ಹಂಚಿಕೆ ಆಗಿರಬೇಕು.
- ಆಗಾಗ್ಗೆ ಚಟುವಟಿಕೆಗಳಿಗೆ ಅನುಸಾರವಾಗಿ ಪ್ರತಿಯೊಬ್ಬರ ಜವಾಬ್ದಾರಿಯೂ ಬದಲಾಗುತ್ತಿರಬೇಕು.
- ಎಲ್ಲರ ಮಾತನ್ನು ಕೇಳುತ್ತಿರಬೇಕು. ಎಲ್ಲರಿಗೂ ಅವರವರ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ದೊರೆಯುವಂತಿರಬೇಕು.

## *(i)* ದೊಡ್ಡ ಗುಂಪಿನಲ್ಲಿ ಕಾರ್ಯ :-

ಕೆಲವು ಕಾರ್ಯಗಳನ್ನು ಶಿಕ್ಷಕರು ದೊಡ್ಡ ಗುಂಪಿನಲ್ಲಿ ಕೈಗೊಳ್ಳಬೇಕು. ಉದಾಹರಣೆಗೆ ಕಥೆಗೆ ಸಂಬಂಧಿಸಿದ ಚಟುವಟಿಕೆಗಳು (ಚಿತ್ರಕ್ಕೆ ಸಂಬಂಧಿಸಿದ ಚರ್ಚೆ, ಕಥೆ ಓದುವುದು, ಕಥೆ ಹೇಳುವುದು ಕಥೆಗೆ ಸಂಬಂಧಿಸಿದ ಚರ್ಚೆ, ಪ್ರಶ್ನೆಗಳನ್ನು ಸೃಷ್ಟಿಸುವುದು ಮತ್ತು ಪ್ರಶ್ನೆ ಕೇಳುವುದು, ಬೆರಳಿಟ್ಟು ಓದುವುದು ಇತ್ಯಾದಿ)
ಕಾಗುಣಿತ (ಚಾರ್ಟ್ ಓದುವುದು, ಮಧ್ಯೆ ಮಧ್ಯೆ ಓದುವುದು ಮತ್ತು ಕೇಳುವುದು)........ ಇವುಗಳನ್ನು ದೊಡ್ಡ ಗುಂಪಿನಲ್ಲಿ ಕೈಗೊಂಡರೆ ಮಕ್ಕಳಿಗೆ ಸಂಬಂಧಿತ ಅಂಶದ ಬಗ್ಗೆ ಸರಿಯಾದ ಅರಿವು ಉಂಟಾಗುತ್ತದೆ.

## *(ii)* ಸಣ್ಣ ಗುಂಪಿನಲ್ಲಿ ಕಾರ್ಯ :-

ದೊಡ್ಡ ಗುಂಪಿನಲ್ಲಿ ಮಾಡಲಾಗಿರುವ ಕಾರ್ಯವನ್ನು ಮಕ್ಕಳಿಗೆ ಸಣ್ಣ ಸಣ್ಣ ಗುಂಪಿನಲ್ಲಿ ಅಭ್ಯಾಸ ಮಾಡಿ ಎಂದು ಹೇಳಿ. ಗುಂಪಿನಲ್ಲಿ ಕಾರ್ಯ ನಡೆಯುವಾಗ ಎಲ್ಲಾ ಮಕ್ಕಳ ಸಹಭಾಗಿತ್ವ ಇರಬೇಕು.

## *(iii)* ವ್ಯಕ್ತಿಗತ ಕಾರ್ಯ :-

ಬರವಣಿಗೆಗೆ ಸಂಬಂಧಿಸಿದ ಕಾರ್ಯವನ್ನು ಒಬ್ಬೊಬ್ಬರಿಗೆ ವ್ಯಕ್ತಿಗತವಾಗಿ ಕೊಡಿ.

ಗಮನಿಸಿ :-

- ಸಣ್ಣ ಗುಂಪಿನಲ್ಲಿ ಕಾರ್ಯ ನಡೆಯುವಾಗ ಶಿಕ್ಷಕರು ಸಹಾಯಕನ ರೂಪದಲ್ಲಿ ಸಹಕಾರ ನೀಡಲಿ.
- ತರಗತಿಯಲ್ಲಿ ಮಕ್ಕಳು ದೊಡ್ಡ ಮತ್ತು ಸಣ್ಣ ಗುಂಪುಗಳಲ್ಲಿ ಹಾಗೂ ವ್ಯಕ್ತಿಗತವಾಗಿ ಕಾರ್ಯ ಮಾಡಲು ಸಾಧ್ಯವಾಗಿಸುವ ಅಭ್ಯಾಸವನ್ನು ಮೊದಲಿನಿಂದಲೂ ಅವರಲ್ಲಿ ಬರುವಂತೆ ಮಾಡಿ.
- ಸಣ್ಣ ಸಣ್ಣ ಗುಂಪಿನಲ್ಲಿ ಕಾರ್ಯ ನಡೆಯುತ್ತಿದ್ದರೆ ಎಲ್ಲಾ ಮಕ್ಕಳ ಸಹಭಾಗಿತ್ವವಿರಲಿ.
- ಕಾರ್ಯವನ್ನು (ಟಾಸ್ಕ್) ಮಕ್ಕಳ ಓದುವಿಕೆಯ ಸ್ಥರವನ್ನು ಗಮನದಲ್ಲಿರಿಸಿಕೊಂಡು ನೀಡಬೇಕು.
- ಯಾವುದೇ ಚಟುವಟಿಕೆ ದೀರ್ಘಕಾಲ ನಡೆಯುವಂತಿದ್ದರೆ ಆ ಚಟುವಟಿಕೆಯನ್ನು ಸಣ್ಣ ಗುಂಪು ಅಥವಾ ವ್ಯಕ್ತಿಗತ ಮಟ್ಟದಲ್ಲಿ ಮಾಡಬಾರದು.

## ಕಾರ್ಯಕ್ರಮ ಅಳವಡಿಕೆ

# 4. ಪ್ರಾರಂಭಿಕ ಹಂತದ ಚಟುವಟಿಕೆಗಳು

### *(i)* ಪ್ರತಿದಿನ ಮಾಡಬೇಕಾದ ಚಟುವಟಿಕೆಗಳು

| ಎಲ್ಲಾ ಮಟ್ಟದ ಮಕ್ಕಳಿಗೂ ಒಂದು ಅವಧಿಗೆ ಈ ಕೆಳಗಿನಂತೆ ಸಮಯ ನಿಗದಿ ಮಾಡಿಕೊಳ್ಳಿ. | | |
|---|---|---|
| ಕಥಾ ಓದು ಮತ್ತು ಅದಕ್ಕೆ ಸಂಬಂಧಿಸಿದ ಚಟುವಟಿಕೆಗಳು | 20 ನಿಮಿಷ | ವಿಷಯವನ್ನು ಅರ್ಥೈಸಲು ಪ್ರಶ್ನೋತ್ತರ– ಏನು? ಏಕೆ? ಹೇಗೆ? ಯಾರು? ಯಾವಾಗ? ಇತ್ಯಾದಿ. ಹರಟೆ, ಮಾತುಕತೆ, ಚರ್ಚೆ, ಸಂವಾದಗಳಿಂದ ಸ್ವಯಂ ವಾಚನ |
| ಮಕ್ಕಳ ಮಟ್ಟಕ್ಕೆ ಅನುಗುಣವಾಗಿ ಚಟುವಟಿಕೆಗಳು | 15 ನಿಮಿಷ | ಸರಳ ಅಕ್ಷರ, ಗುಣಿತಾಕ್ಷರ ಸಜಾತಿ ವಿಜಾತಿ ಒತ್ತಕ್ಷರಗಳ ಪರಿಚಯ ಮತ್ತು ಅಳವಡಿಕೆ |
| ಸರಳ ಅಕ್ಷರ/ಕಾಗುಣಿತ/ ಒತ್ತಕ್ಷರಗಳು | 10 ನಿಮಿಷ | ಸರಳಾಕ್ಷರಗಳು, ಕಾಗುಣಿತ ಓದು. ಪ್ರತಿ ವ್ಯಂಜನಾಕ್ಷರಕ್ಕೂ ಸ್ವರಗಳನ್ನು ಸೇರಿಸಿ ಪದಗಳನ್ನು ಓದುವ ಅಭ್ಯಾಸ ಮತ್ತು ಒತ್ತಕ್ಷರಗಳು (ಕಾಗುಣಿತ ರಟ್ಟು ಬಳಕೆ) |
| ಆಟ | 5 ನಿಮಿಷ | ಮಕ್ಕಳ ಮಟ್ಟಕ್ಕೆ ಅನುಗುಣವಾಗಿ ಆಟಗಳು ಅಕ್ಷರ / ಪದ / ವಾಕ್ಯ / ಪ್ಯಾರಾ / ಕಥೆ. |
| ಬರಹ | 10 ನಿಮಿಷ | ಏನನ್ನಾದರೂ ಯೋಚಿಸು, ಹೇಳು ಮತ್ತು ಬರೆ. ಕಾಗುಣಿತ – ಒತ್ತಕ್ಷರಗಳ ಪದಗಳ ಬರವಣಿಗೆ ಅಭ್ಯಾಸ ಹಾಳೆ, ಸ್ವಯಂಲೇಖನ |

- ಯಾವುದೇ ಚಟುವಟಿಕೆಗೆ ಹೆಚ್ಚಿನ ಸಮಯ ನೀಡುವ ಅಗತ್ಯವಿಲ್ಲ.
- ಹಾಗೆಯೇ ಯಾವುದಾದರೂ ವಿಷಯವನ್ನು ಅರ್ಥ ಮಾಡಿಕೊಳ್ಳಲು ಅವಕಾಶ ನೀಡಿ. ಓದುವ ಮತ್ತು ಓದಿಸುವ ಕಾರ್ಯದಲ್ಲೂ ಸಮತೋಲನದಲ್ಲಿ ಇರುವಂತೆ ನೋಡಿಕೊಳ್ಳಿ.
- ಇದರ ಪ್ರಭಾವ ಮಕ್ಕಳ ಕಲಿಕೆಯ ಮೇಲಾಗುತ್ತದೆ. ಆದ್ದರಿಂದ ಒಟ್ಟಾರೆ ತರಗತಿಯ ಚಟುವಟಿಕೆಗಳಲ್ಲಿ ಸಮತೋಲನ ಕಾಪಾಡಿಕೊಳ್ಳುವುದು ಅತ್ಯಾವಶ್ಯಕ.

### *(ii)* ಹರಟೆ (ಮಾತುಕತೆ)

ಉದ್ದೇಶ :– ಮಕ್ಕಳು ತಮ್ಮ ಅಕ್ಕ–ಪಕ್ಕದಲ್ಲಿರುವ ವಸ್ತುಗಳನ್ನು ಕುರಿತಾಗಿ ಆತ್ಮ ವಿಶ್ವಾಸದಿಂದ ಯಾರ ಮುಂದೆಯಾದರೂ ತಮ್ಮ ವಿಚಾರಗಳನ್ನು ಹೇಳುವುದು ಮತ್ತು ತಮ್ಮ ಪೂರ್ವ ಜ್ಞಾನದ ಆಧಾರದ ಮೇಲೆ ಆ ವಿಚಾರಗಳನ್ನು ಮತ್ತು ಹೊಸ ಮಾಹಿತಿಯನ್ನು ಜೋಡಿಸಿ ಹೇಳುವುದು. ಮಕ್ಕಳ ಜೊತೆ ತರಗತಿಯಲ್ಲಿ ಪ್ರತಿದಿನ ಮಾತುಕತೆಯಾಡಲು ಕೆಲವು ಚಟುವಟಿಕೆಗಳನ್ನು ಕೆಳಗೆ ಕೊಡಲಾಗಿದೆ.

**ಗಮನಿಸಿ:**

ನಾನು ಏನೋ ಹೇಳಬೇಕು...!

ಶಿಕ್ಷಕ ಯಾವುದಾದರೊಂದು ವಿಷಯದ ಮೇಲೆ ಮಕ್ಕಳ ಜತೆ ಮಾತನಾಡಲು ಪ್ರಾರಂಭಿಸುವುದು. ಉದಾಹರಣೆಗೆ ಈ ದಿನ ನಾನು ಏನು ತಿಂದೆ, ಇವತ್ತು ಬಹಳ ಸೆಖೆ ಇದೆ. ಇವತ್ತು ಮಳೆ ಬರಬಹುದು, ಇತ್ಯಾದಿ. ಮಕ್ಕಳನ್ನು ಈ ನಿಮ್ಮ ಮಾತುಕತೆಯಲ್ಲಿ ಸೇರಿಸಿಕೊಳ್ಳಿ ಹಾಗೂ ಅವರಿಗೆ ಆಯಾ ವಿಷಯಗಳ ಬಗ್ಗೆ ತಮ್ಮ ಅನುಭವವನ್ನು ವ್ಯಕ್ತಪಡಿಸುವಂತೆ ಹೇಳಿ. ಇದೇ ರೀತಿ ಪ್ರತಿದಿನವೂ ಬೇರೆ ಬೇರೆ ವಿಷಯಗಳ ಮೇಲೆ ಮಾತನಾಡಿ ಜೊತೆಗೆ ಮಕ್ಕಳಿಗೆ ಅವರವರ ತಂದೆ-ತಾಯಿ, ಅಜ್ಜ-ಅಜ್ಜಿ, ಸೋದರ ಸೋದರಿಯರೊಂದಿಗೆ ಬೇರೆ ಬೇರೆ ವಿಷಯಗಳ ಬಗ್ಗೆ ಮಾತನಾಡಿಕೊಂಡು ಬರಲು ಹೇಳಿ.

ನನ್ನ ಮನಸ್ಸಿನಿಂದ....!

ದೊಡ್ಡ ಗುಂಪಿನಲ್ಲಿ ಮಕ್ಕಳೊಂದಿಗೆ ಹೀಗೆ ಹೇಳಿ 'ಏನು ಗೊತ್ತಾ? ಇವತ್ತು ನಾನು ಬೆಳಿಗ್ಗೆ ಮಲಗಿ ಎದ್ದಾಗ ಇವತ್ತು ಮಳೆ ಬರಲಿ ಆಗ ಆ ಮಳೆಯಲ್ಲಿ ನಾನು ನೆನೆಯಬೇಕು, ನರ್ತಿಸಬೇಕು, ಆಟವಾಡಬೇಕೆಂದು ಮನಸ್ಸಿನಲ್ಲಿ ಅನ್ನಿಸುತ್ತಿತ್ತು'. ಈಗ ಮಕ್ಕಳಿಗೂ ಸಹ ಅವರವರ ಮನಸ್ಸಿನಲ್ಲಿ ಬಂದದ್ದನ್ನು ವ್ಯಕ್ತಪಡಿಸಲು ಹೇಳಿರಿ. ಉದಾಹರಣೆಗೆ ಏನೋ ನೋಡಿದೆ, ಯೋಚಿಸಿದೆ ಅಥವಾ ಏನಾದರೂ ಮಾಡಲಿಚ್ಛಿಸಿದೆ ಇತ್ಯಾದಿ. ಮಕ್ಕಳಿಗೆ <u>ಮೊದಲು ಯೋಚಿಸಲು ಹೇಳಿ.</u> ನಂತರ ಅವರನ್ನು ಪ್ರಶ್ನಿಸಿರಿ.

ಹೀಗೆ ಮಕ್ಕಳಿಗೆ ವಿವಿಧ ವಿಷಯಗಳನ್ನು ಕೊಟ್ಟು ನೀವು ಮಾತುಕತೆ ನಡೆಸಬಹುದು. ಮಾತುಕತೆಯ ನಂತರ ಇತರ ಚಟುವಟಿಕೆಗಳನ್ನು ನಡೆಸಿ.

## *(iii)* ಚಿತ್ರಪಟ *(Picture calender)*:

**ಉದ್ದೇಶ** : ಮಕ್ಕಳಲ್ಲಿ ಉತ್ಸಾಹ, ಕುತೂಹಲವನ್ನು ಬೆಳೆಸುವುದು, ಏಕಾಗ್ರತೆ ಹೆಚ್ಚಿಸಿ, ವಾಕ್ಯರಚನೆ ಕೌಶಲ್ಯದೊಂದಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಹೆಚ್ಚಿಸಿ ಶಿಕ್ಷಣ ಮತ್ತು ಮಕ್ಕಳ ನಡುವಿನ ಅಂತರವನ್ನು ಕಡಿಮೆ ಮಾಡಿ.

**ಪ್ರಕ್ರಿಯೆಗಳು** : ಇದರಲ್ಲಿ ಮಕ್ಕಳಿಗೆ ನದಿ, ಮಾರುಕಟ್ಟೆ, ನಗರಗಳು, ಜಾತ್ರೆ ಮುಂತಾದವುಗಳ ಚಿತ್ರ ತೋರಿಸಿ ಆ ಕುರಿತಾಗಿ ಅವರ ಅನಿಸಿಕೆ ಕೇಳುವುದು.

* ಮೊದಲು ಚಿತ್ರಪಟದಲ್ಲಿ ಕಾಣುವ ವಸ್ತುಗಳ ಹೆಸರುಗಳನ್ನು ಹೇಳಲಿ
* ಚಿತ್ರಗಳನ್ನು ಆದರಿಸಿ ಅಭಿನಯ ಮಾಡಲು ಪ್ರೇರೇಪಿಸಿ.
* ಮಕ್ಕಳು ಸರತಿಯಂತೆ ಚಿತ್ರಪಟದಲ್ಲಿ ಒಂದು/ಎರಡು/ಮೂರು...... ಹತ್ತು ಪದಗಳನ್ನು ಗುರುತಿಸಿ ಹೇಳಲಿ
* ಗುರುತಿಸಿದ ಪದಗಳಿಗೆ ಸರಳವಾಕ್ಯಗಳನ್ನು ರಚಿಸಲು ನೆರವಾಗಿ.
* ಮುಂದೆ ಅವರು ಸ್ವಯಂ ಲೇಖನ... (ಪ್ಯಾರಾ, ಕಥೆ, ಪ್ರಬಂಧ)ದಲ್ಲಿ ಈ ಪದ/ವಾಕ್ಯಗಳನ್ನು ಬಳಸಲು ನೆರವಾಗಿ.
* ಮಕ್ಕಳು ಕಲಿತ ಪದಗಳನ್ನು ಶಾಲೆಯ ಇತರ ವಿಷಯಗಳಿಗೆ (ವಿಜ್ಞಾನ, ಪರಿಸರ....) ಸಂಬಂಧೀಕರಿಸಲಿ.
* ಮಕ್ಕಳು ಚಿತ್ರಪಟದಲ್ಲಿ ಸನ್ನಿವೇಶಗಳನ್ನು ಗುರುತಿಸಿ ಆ ವಿಷಯದ ಮೇಲೆ ಚರ್ಚಿಸಲಿ. (ಉದಾ : ನೀರಿನ ಅಪವ್ಯಯ, ಕಲುಷಿತ ನೀರು.... ಇತ್ಯಾದಿ)

**ಸೂಚನೆ : ಚಿತ್ರಪಟವು ಎಲ್ಲಾ ಮಕ್ಕಳಿಗೂ ಕಾಣಿಸುವಂತಿರಬೇಕು.**

## (iv) ಕಥೆ ಓದುವುದು

### (i) ಒಟ್ಟು ಗುಂಪಿಗೆ ಕಥಾ ಅಳವಡಿಕೆ :

ಮಕ್ಕಳ ಓದುವಿಕೆಯ ಮಟ್ಟ ಯಾವುದೇ ಇರಲಿ, ಅವರ ಜೊತೆ ಕಥೆಗೆ ಸಂಬಂಧಿಸಿದ ವಿಭಿನ್ನ ಪ್ರಕಾರದ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ಮಕ್ಕಳಲ್ಲಿ ಕೇಳುವ, ಅರ್ಥಮಾಡಿಕೊಳ್ಳುವ, ಮಾತನಾಡುವ ಮತ್ತು ಬರೆಯುವ ಸಾಮರ್ಥ್ಯ ವಿಕಾಸಗೊಳ್ಳುತ್ತದೆ. ಮತ್ತು ಅವರ ಶಬ್ದ ಭಂಡಾರ ಬೆಳೆಯುತ್ತದೆ. ಒಂದು ಕಥೆಯನ್ನು ಕನಿಷ್ಠ 2 ದಿನ ಬಳಸಿ. ಪ್ರತಿಯೊಬ್ಬರ ಬಳಿಯೂ ಅವರವರ ಕಥಾಗುಚ್ಛ ಇರುವಂತೆ ನೋಡಿಕೊಳ್ಳಿ.

- **ಕಥೆ ಓದುವ ಮೊದಲು ಕಥೆಯಲ್ಲಿರುವ ಚಿತ್ರಗಳು ಮತ್ತು ಹೆಸರುಗಳ ಮೇಲೆ ಚರ್ಚೆಮಾಡಿ.** ಮಕ್ಕಳಿಗೆ ಈ ರೀತಿಯ ಪ್ರಶ್ನೆಗಳನ್ನು ಕೇಳಿ ಚಿತ್ರದಲ್ಲಿ ಏನು ಕಾಣಿಸುತ್ತಿದೆ? ಯಾರು ಏನು ಮಾಡುತ್ತಿದ್ದಾರೆ? ಕಥೆಯಲ್ಲಿರುವ ಚಿತ್ರ ಮತ್ತು ಹೆಸರುಗಳನ್ನು ನೋಡಿದಾಗ ಕಥೆಯಲ್ಲಿ ಏನಾಗಬಹುದು ಹೇಳಿ ನೋಡೋಣ? ಇತ್ಯಾದಿ (ಇದರಿಂದ ಮಕ್ಕಳಲ್ಲಿ ಕಲ್ಪನಾಶಕ್ತಿ ಹಾಗೂ ಊಹಿಸುವ ಶಕ್ತಿ ವಿಕಾಸವಾಗುವುದು).
- **ಮಕ್ಕಳಲ್ಲಿ 'ಮಾದರಿ ಓದುವಿಕೆ'ಯ ಬಗೆಗೆ ಅರಿವು ಮೂಡುವಂತೆ ಆಗಲು ಕಥೆಯನ್ನು ಸ್ಪಷ್ಟ ಉಚ್ಛಾರಣೆ ಮತ್ತು ಧ್ವನಿಯ ಏರಿಳಿತದೊಂದಿಗೆ ಓದಿ ಹೇಳಿ.** ಮಕ್ಕಳು ನೀವು ಹೇಳಿದ್ದನ್ನು ಮತ್ತೆ ಪುನರುಚ್ಛರಿಸದಂತೆ ನೋಡಿಕೊಳ್ಳಿ (ಹೀಗೆ ಪುನರುಚ್ಛರಿಸಿದರೆ ಕಥೆಯನ್ನು ಬಾಯಿಪಾಠ ಮಾಡಿದಂತಾಗಿ ಓದುವುದನ್ನು ಕಲಿಯುವುದಿಲ್ಲ.)
- **ಕಥೆಯನ್ನು ಓದಿ ಹೇಳಿದ ಮೇಲೆ ಕಥೆಯನ್ನು ಆಧರಿಸಿದಂತೆ ಅದರ ಸಾರಾಂಶ, ತರ್ಕ, ಶಬ್ದಭಂಡಾರ ಮತ್ತು ಅಭಿಪ್ರಾಯ** – ಇವುಗಳನ್ನು ಅವರಿಂದ ಹೇಳಿಸುವಂಥ ಪ್ರಶ್ನೆಗಳನ್ನು ಕೇಳಿ. ಮಕ್ಕಳು ಹೆಚ್ಚು ಯೋಚಿಸಿ ಉತ್ತರ ನೀಡುವಂತೆ ಪ್ರಯತ್ನ ಮಾಡಿ. (ಯಾವುದೇ ಕಥೆಯ ಬಗ್ಗೆ ಚರ್ಚೆ ಆದಾಗ ಮಕ್ಕಳಿಗೆ ಕಥೆಯಲ್ಲಿ ಆಸಕ್ತಿ ಹೆಚ್ಚುತ್ತದೆ. ಇದರಿಂದ ಕಥೆ ಕೇಳಿ ಅರ್ಥ ಮಾಡಿಕೊಂಡು ಗ್ರಹಿಸುವ ಹಾಗೂ ಓದಿ ಅರ್ಥ ಮಾಡಿಕೊಳ್ಳುವ 'ಗ್ರಹಣ ದಕ್ಷತೆ', ಇವುಗಳ ನಡುವೆ ಸಂಬಂಧ ಏರ್ಪಡಲು ಅನುವಾಗುತ್ತದೆ.)
- **ಮಾತುಕತೆ ಮತ್ತು ಹಾವ-ಭಾವದೊಂದಿಗೆ ಕಥೆ ಓದು.** ನಂತರ ಶಿಕ್ಷಕ ಕಥೆಯ ಪ್ರತಿಯೊಂದು ಪದದ ಮೇಲೆ ಬೆರಳಿಟ್ಟು ನಿಧಾನವಾಗಿ ಓದಲಿ. ಕಥೆ ಓದುವ ಸಮಯದಲ್ಲಿ ಪ್ರತಿಯೊಬ್ಬರ ಬಳಿ ಅವರವರ ಕಥೆ ಪುಸ್ತಕ ಇರುವಂತೆ ಹಾಗೂ ಅವರೂ ಸಹ ಕಥೆಯ ವಾಕ್ಯಗಳ ಮೇಲೆ ಬೆರಳಿಟ್ಟು ಅನುಕರಿಸುವಂತೆ ಗಮನವಿರಿಸಿ. ಮಕ್ಕಳು, ಪುನಃ ಪುನಃ ಉಚ್ಛರಿಸದಂತೆ ನೋಡಿಕೊಳ್ಳಿ (ಪದಗಳ ಮೇಲೆ ಬೆರಳಿಟ್ಟು ಓದುವುದರಿಂದ ಭಾಷೆಯ ಲಿಖಿತ ರೂಪದ ಅರಿವು ಉಂಟಾಗುತ್ತದೆ.)
- **ನಂತರ ತಾವು ಓದಿದ ಕಥೆಯನ್ನು ಮಕ್ಕಳಿಗೆ ಸಣ್ಣ ಸಣ್ಣ ಗುಂಪಿನಲ್ಲಿ ಓದುವಂತೆ ಹೇಳಿ :** ಆರಂಭಿಕ ಮತ್ತು ಮುಂದುವರಿದ ಮಕ್ಕಳನ್ನು ಗುಂಪುಮಾಡಿ ಅವರಿಗೆ ಸ್ವತಂತ್ರ ನೀಡಿ ಇಷ್ಟವಾದ ಜಾಗದಲ್ಲಿ ಓದಲು ತಿಳಿಸಿ. (ಎಲ್ಲರೂ ಓದುವಂತೆ ಪ್ರೇರೇಪಿಸುವುದು ಬಹಳ ಮುಖ್ಯ.)
- **ಪ್ರತ್ಯೇಕ ಗುಂಪುಗಳಿಂದ ಯಾರಾದರೂ ಒಬ್ಬರಿಗೆ ಓದುವಂತೆ ಹೇಳಿ.** 'ಈಗ ಯಾರು ಓದುವಿರಿ' ಅಥವಾ 'ನಾನು ಓದಿದ ಹಾಗೆ ಯಾರು ಓದುವಿರಿ? ಈ ರೀತಿಯ ವಾಕ್ಯಗಳನ್ನು ಬಳಸಿ. ಪ್ರತಿದಿನವೂ ಬೇರೆ ಬೇರೆ ಮಕ್ಕಳಿಗೆ ಓದುವ ಅವಕಾಶಕೊಡಿ. ಓದಿದ ನಂತರ ಮಕ್ಕಳಿಗೆ ಮರೆಯದೆ 'ಶಭಾಷ್' ಎಂದು ಹೇಳಿ ಪ್ರೋತ್ಸಾಹಿಸಿ. (ಹೀಗೆ, ಪ್ರೋತ್ಸಾಹ ದೊರೆತಾಗ ಮಕ್ಕಳು ಪ್ರೇರಿತರಾಗುತ್ತಾರೆ. ಹಾಗೂ ಓದುವ ಪ್ರಯತ್ನ ಮಾಡುತ್ತಾರೆ.)
- **ಮಕ್ಕಳಿಗೆ ಕಥೆಯಲ್ಲಿ ಇಷ್ಟವಾದ ಶಬ್ದಗಳ ಸುತ್ತ ವೃತ್ತವನ್ನು ಬರೆದು ಗುರುತಿಸಲು, ಇಲ್ಲವೆ ಆ ಪದವನ್ನು ಹುಡುಕಲು ಹೇಳಿ.** ಮಕ್ಕಳಿಗೆ ಅದೇ ಪದಗಳನ್ನು ಕಪ್ಪು ಹಲಗೆ ಮೇಲೆ / ನೆಲದ ಮೇಲೆ ಬರೆಯಲು ಹೇಳಿ. (ಕೆಲವು ದಿನಗಳ ನಂತರ ಶಿಕ್ಷಕರು ಕಥೆಯ ಕೆಲವು ಪದಗಳನ್ನು ಅಥವಾ ವಾಕ್ಯಗಳನ್ನು ಹೇಳಲಿ. ಅವುಗಳನ್ನು ಮಕ್ಕಳು ಕಥೆಯಲ್ಲಿ ಹುಡುಕಿ ತೋರಿಸಲಿ.)

## ಕಥೆಯ ಬಗೆಗೆ ಚರ್ಚೆ ಏಕೆ ಮಾಡಬೇಕು?

ಚರ್ಚೆ ಎಂದರೆ ಮಕ್ಕಳಿಗೆ ಕೇವಲ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು ಮಾತ್ರವಲ್ಲ. ಇದರ ಅರ್ಥವಿಷ್ಟೆ ಅವರು ತಮ್ಮ ಆಲೋಚನೆಯನ್ನು ವಿಷಯ / ಪಾಠ / ಕಥೆ ಇವುಗಳೊಂದಿಗೆ ಜೋಡಿಸಲು ಸಾಧ್ಯವಾಗಬೇಕು. ಮಕ್ಕಳೊಂದಿಗೆ ಯಾವುದಾದರೂ ಕಥೆಯ ವಿಷಯ, ಚಿತ್ರ ಅಥವಾ ಶೀರ್ಷಿಕೆಯ ಮೇಲೆ ಚರ್ಚೆ ನಡೆಸಿದಾಗ ಅವರಲ್ಲಿ ಊಹಿಸುವ ಶಕ್ತಿ ವಿಕಸಿತವಾಗುತ್ತದೆ. ಅಲ್ಲದೆ, ಕಥೆಯ ಸಂದರ್ಭವೇನು ಎಂದು ಅರ್ಥ ಮಾಡಿಕೊಳ್ಳಲು ಸುಲಭವಾಗುತ್ತದೆ. ಈ ಸಾಮರ್ಥ್ಯವು ಕಥೆಯನ್ನು ಧಾರಾ ಪ್ರವಾಹದಂತೆ ಓದಲು ಸಹಾಯ ಮಾಡುತ್ತದೆ.

## (v) ಮಕ್ಕಳ ಮಟ್ಟಕ್ಕೆ ಅನುಗುಣವಾಗಿ ಚಟುವಟಿಕೆಗಳು :

### ಪ್ರಾರಂಭಿಕ ಮಟ್ಟ

1. ವರ್ಣಮಾಲೆಯನ್ನು ಅಕ್ಷರ ರಟ್ಟಿನ ಸಹಾಯದಿಂದ ಹಂತ–ಹಂತವಾಗಿ ಕಲಿಸುವುದು – ಅಂದರೆ 5, 10 ಅಕ್ಷರಗಳಂತೆ ಬರವಣಿಗೆ ಜೊತೆಗೆ ಹ್ರಸ್ವಸ್ವರ, ದೀರ್ಘಸ್ವರದ ಉಚ್ಚಾರಣೆ ಹೇಗೆ ಎಂದು ಧ್ವನಿ ಏರಿಳಿತದೊಂದಿಗೆ ಪರಿಚಯಿಸುವುದು.
2. ಕಲಿಕೆಗೆ ಅನುಗುಣವಾಗಿ ಪ್ರತಿದಿನ **ಗು, ಹೊಂ, ಜೋ** ಆಟ ಆಡಿಸುವುದು ಮತ್ತು **ಮೈಂಡ್ ಮ್ಯಾಪ್** ಚಟುವಟಿಕೆ ಮಾಡಿಸುವುದು.
3. ಅಕ್ಷರ ಮಾಲೆ ರಟ್ಟಿನಲ್ಲಿ ಅಕ್ಷರಗಳನ್ನು ಗುರುತಿಸುವುದು.
4. ಚಿತ್ರದ ಮೂಲಕ ಅಕ್ಷರಗಳನ್ನು ಪತ್ತೆ ಮಾಡುವುದು.
5. ಅಕ್ಷರಗಳ ಉಕ್ತಲೇಖನ ಹಾಗೂ ಸರಳ ಪದಗಳ ಉಕ್ತಲೇಖನ ನೀಡುವುದು ಉದಾ: ಅ. ಕಮಲ
6. ಮುಚ್ಚಿದ ಅಕ್ಷರಗಳನ್ನು ಜೋರಾಗಿ ಹೇಳಿಸುವುದು.
7. ಸರಳ ಕನ್ನಡ ಭಾಗ – 1 ಪುಸ್ತಕದ 1–5ರವರೆಗಿನ ಸರಳಾಕ್ಷರ ಪದವಾಚನವನ್ನು ಪ್ರಾರಂಭದಲ್ಲಿ ವರ್ಣಮಾಲೆ ರಟ್ಟಿನ ಸಹಾಯ ಪಡೆದು ನಂತರದಲ್ಲಿ ಸಹಾಯವಿಲ್ಲದೆ ಓದುವಂತೆ ಪ್ರೋತ್ಸಾಹಿಸಿ.
8. ಅಭ್ಯಾಸ ಪುಸ್ತಕ 1 ರ ಆಯ್ದ ಚಟುವಟಿಕೆಗಳನ್ನು ಕಲಿಕೆಗೆ ಅನುಗುಣವಾಗಿ ಅಳವಡಿಸಿ.
9. ಸರಳ ಅಕ್ಷರಗಳಿಂದ ಪದ ರಚನೆ ಆಟ ಆಡಿಸುವುದು.

**ವಿ. ಸೂ. ಯಾವುದೇ ಮಗು ಮೊದಲ ಹಂತದಲ್ಲಿ ಗುರುತಿಸಿದ ಮಟ್ಟದಿಂದ ಮುಂದುವರಿದಾಗ ಆ ಮಗುವನ್ನು ಪ್ರೋತ್ಸಾಹಿಸಿ ಮುಂದಿನ ಮಟ್ಟದ ಗುಂಪಿನ ಚಟುವಟಿಕೆಯಲ್ಲಿ ತೊಡಗಿಸಿ.**

## ಮಕ್ಕಳಲ್ಲಿ ಕಂಡುಬರುವ ಸಾಮಾನ್ಯ ವಾಚನ ದೋಷಗಳು :

ಮಕ್ಕಳಲ್ಲಿ ಅಕ್ಷರ ಪರಿಚಯದ ಕೊರತೆ, ಪದ–ವಾಕ್ಯ ಕೂಡಿಸಿ ಓದುವ ಸಾಮರ್ಥ್ಯದ ಕೊರತೆ, ಉಚ್ಚಾರಣಾ ದೋಷಗಳು ಮತ್ತು ಓದಿದ ವಿಷಯವನ್ನು ಅರ್ಥೈಸುವಿಕೆಯ ಕೊರತೆಗಳನ್ನು ನಾವು ಈ ಕೆಳಕಂಡಂತೆ ಕಾಣಬಹುದು:

* ಅಕ್ಷರಗಳನ್ನು ಸರಿಯಾಗಿ ಗುರುತಿಸದೆ ಊಹೆಯ ಮೇರೆಗೆ ಓದುವುದು,
* ಒಂದು ಅಕ್ಷರಕ್ಕೆ ಬದಲು ಮತ್ತೊಂದು ಅಕ್ಷರವನ್ನು ಓದುವುದು,
* ಓದುವಾಗ ನಡು ನಡುವೆ ಕೆಲವು ಅಕ್ಷರ / ಪದಗಳನ್ನು ಬಿಟ್ಟುಬಿಡುವುದು,
* ಪದದ ಅಕ್ಷರಗಳನ್ನು ಹಿಂದು ಮುಂದಾಗಿ ಓದುವುದು,
* ಅ, ಸ, ಶ, ಷ, ಹ ಕಾರ ಮತ್ತು ಅಲ್ಪಪ್ರಾಣ – ಮಹಾಪ್ರಾಣ ಅಕ್ಷರ ಉಚ್ಚಾರಣಾ ದೋಷಗಳು,
* ಹ್ರಸ್ವ–ದೀರ್ಘ ಸ್ವರಗಳ ವ್ಯತ್ಯಾಸ ಗಮನಿಸದಿರುವುದು,
* ಓದುವಾಗ ಅನೇಕಬಾರಿ ಕಣ್ಣು ಮಿಟುಕಿಸುವುದು,
* ಮೌನವಾಗಿ ಓದುವಾಗಲೂ ತುಟಿ ಅಲ್ಲಾಡಿಸುವುದು,
* ಗಟ್ಟಿಯಾಗಿ ಓದುವಾಗ ಅರ್ಥಕ್ಕೆ ಗಮನಕೊಡದಿರುವುದು,
* ವಾಕ್ಯ / ಪದಗಳನ್ನು ಒಟ್ಟಾರೆ ಕೂಡಿಸಿಕೊಂಡು ಓದದಿರುವುದು,
* ವಾಕ್ಯವೃಂದ / ಕಥೆಯ ವಾಚನದ ನಂತರ ಅದರ ಸಾರಾಂಶದ ಬಗ್ಗೆ ಹೇಳಲು ಗೊತ್ತಿಲ್ಲದಿರುವುದು

## ಮಟ್ಟವಾರು ಆಟಗಳು

### 1.) ಪದ ರಚನೆಯ ಚಟುವಟಿಕೆಗಳು (ಪ್ರಾರಂಭಿಕ ಮಟ್ಟ – ಆಟಗಳು)

**ಅಕ್ಷರ ಮತ್ತು ಧ್ವನಿ ಚಿಹ್ನೆಗಳನ್ನು ತಿಳಿದುಕೊಳ್ಳುವ ಸಲುವಾಗಿ ಪ್ರಾರಂಭಿಕ ಮಟ್ಟದ ಮಕ್ಕಳಿಗೆ ಈ ಕೆಳಗಿನ ಆಟಗಳನ್ನು ಆಡಿಸಿ.**

#### ಅಕ್ಷರ ಹುಡುಕುವ ಆಟ

ಸಣ್ಣ ಸಣ್ಣ ಗುಂಪಿನಲ್ಲಿ ಮಕ್ಕಳಿಗೆ ಅಕ್ಷರಗಳ ಕಾರ್ಡನ್ನು ನೀಡಿ. ಯಾವುದಾದರೊಂದು ಅಕ್ಷರ ಹೇಳಿ ಮಕ್ಕಳು ತಮ್ಮ ತಮ್ಮ ಸಮೂಹದಲ್ಲಿ ಹುಡುಕಿ ಅದನ್ನು ನೆಲದ ಮೇಲೆ ಬರೆಯಲಿ.

#### ಅಕ್ಷರದ ಮೇಲೆ ನೆಗೆಯುವ ಆಟ

ನೆಲದ ಮೇಲೆ ಕೆಲವು ಅಕ್ಷರಗಳನ್ನು ಬರೆಯಿರಿ. ಮಕ್ಕಳಿಗೆ ಹೇಳಿದ ಅಕ್ಷರದ ಮೇಲೆ ನೆಗೆಯುವಂತೆ ಹೇಳಿ.

ಉದಾ : 'ಲ' ಅಕ್ಷರದ ಮೇಲೆ ನೆಗೆಯಿರಿ

#### ಅಕ್ಷರದಿಂದ ಪದ ಆಟ

ಮಕ್ಕಳನ್ನು ಚಿಕ್ಕ ಚಿಕ್ಕ ಸಮೂಹಗಳನ್ನಾಗಿ ಮಾಡಿ. ನಾಲ್ಕೈದು ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ.

ಉದಾ:– ಸಮರ, ಮಕ್ಕಳು ಅಕ್ಷರಗಳಿಂದ ಪದ ರಚಿಸಿರಿ ಮತ್ತು ಬರೆಯಿರಿ. ಉದಾ:– ಸಮ, ಮರ, ರಮ, ಸರ ಇತ್ಯಾದಿ

#### ನನ್ನ ಅಕ್ಷರ ಹುಡುಕುವ ಆಟ

ಯಾವುದಾದರೊಂದು ಅಕ್ಷರವನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ ಮತ್ತು ಆ ಅಕ್ಷರವನ್ನು ಓದಿರುವ ಕಥೆಯಲ್ಲಿ ಹುಡುಕಿ ಅದರ ಮೇಲೆ ಗೆರೆ ಎಳೆಯುವಂತೆ ಹೇಳಿ. ಆ ಅಕ್ಷರವನ್ನು ಮಕ್ಕಳು ನೆಲ ಅಥವಾ ಕಾಪಿಪುಸ್ತಕದಲ್ಲಿ ಬರೆಯುವಂತೆ ಹೇಳಿ.

#### ಎಷ್ಟು ಅಕ್ಷರಳಿವೆ?

ಯಾವುದಾದರೊಂದು ಪದ ಹೇಳಿ, ಪುನಃ ಅದೇ ಪದವನ್ನು ಬಿಡಿಸಿ ಹೇಳಿ.

ಉದಾ:– 'ಮರ' 'ಮ' 'ರ' ಮಕ್ಕಳನ್ನು ಕೇಳಿ ಮೊದಲು ಯಾವ ಅಕ್ಷರ ಕೇಳಿಸುತ್ತದೆ ಮತ್ತು ಅಂತಿಮವಾಗಿ ಯಾವ ಅಕ್ಷರ ಕೇಳಿಸುತ್ತದೆ? ಎಂದು. ಈ ರೀತಿಯಾಗಿ ತಾವು ಪದ ಹೇಳಿ, ಮಕ್ಕಳು ಅದನ್ನು ಬಿಡಿಸಿ ಅದರ ಅಕ್ಷರಗಳನ್ನು ಹೇಳಲಿ

ಮರ      ಕವನ

#### ಬುಟ್ಟಿಯ ಆಟ

ಶಿಕ್ಷಕರು ಅಕ್ಷರಗಳನ್ನು ಬರೆದಿರುವ ಚೀಟಿಗಳನ್ನು ಬುಟ್ಟಿಯಲ್ಲಿ ಹಾಕಿ, ಬುಟ್ಟಿಯನ್ನು ಮಕ್ಕಳ ಮಧ್ಯದಲ್ಲಿ ಇಡಿ. ಬುಟ್ಟಿ ವೃತ್ತಾಕಾರದಲ್ಲಿ ಹೋಗಲಿ. ಶಿಕ್ಷಕರು ಚಪ್ಪಾಳೆ ಹೊಡೆಯಲು ಪ್ರಾರಂಭಿಸಲಿ. ಚಪ್ಪಾಳೆ ನಿಲ್ಲುತ್ತಿದಂತೆಯೇ ಯಾರ ಬಳಿ ಬುಟ್ಟಿ ಇರುತ್ತದೆಯೋ, ಆ ಮಗು ಬುಟ್ಟಿಯುಲ್ಲಿರುವ ಒಂದು ಅಕ್ಷರದ ಚೀಟಿಯನ್ನು ಎತ್ತಿಕೊಂಡು ಅದರಲ್ಲಿರುವ ಅಕ್ಷರವನ್ನು ಓದುವುದು ಮತ್ತು ಅದರಿಂದ ಆರಂಭವಾಗುವ ಶಬ್ದವನ್ನು ಹೇಳುವುದು.

**ಸೂಚನೆ : ಈ ಕೈಪಿಡಿಯಲ್ಲಿ ನೀಡಿರುವ ಪ್ರತಿಯೊಂದು ಆಟದ ಉದ್ದೇಶವೇನೆಂದರೆ ಮಕ್ಕಳನ್ನು ಓದಲು – ಬರೆಯಲು ಪ್ರೋತ್ಸಾಹಿಸುವುದು. ಆದುದರಿಂದ ಮಕ್ಕಳಿಗೆ ಬರೆದಿರುವ ಅಕ್ಷರ/ಪದಗಳನ್ನು ಸ್ವತಃ ಓದುವಂತೆ ಹೇಳಿ.**

**ಅಕ್ಷರ ಮಟ್ಟ**

**ಸೂಚನೆ : ಪ್ರಾರಂಭದ 2/3 ದಿನಗಳಲ್ಲಿ ಪ್ರಾರಂಭದ ಮಟ್ಟ ಚಟುವಟಿಕೆಯಲ್ಲಿನ ಆಯ್ದ ಚಟುವಟಿಕೆಗಳನ್ನು ಮಾಡಿಸುವುದು.**

1. ಚಿತ್ರದ ಮೂಲಕ ಅಕ್ಷರಗಳನ್ನು ಬರೆಸಿ ಅದನ್ನು ಅಕ್ಷರ ರಟ್ಟಿನಲ್ಲಿ ಪತ್ತೆ ಹಚ್ಚುವುದು. ಉದಾ : ಆನೆ
2. ಹನುಮಂತನ ಬಾಲ ಚಟುವಟಿಕೆಯಿಂದ ಪದರಚನೆ ಆಟ ಆಡಿಸುವುದು.
3. ಮೈಂಡ್ ಮ್ಯಾಪ್(ಮಾನಸಿಕ ಆಲೇಖ) ಚಟುವಟಿಕೆ ಮಾಡಿಸುವುದು.
4. ಗುಣಿತಾಕ್ಷರಗಳು ಹೇಗೆ ಆಗುವುದೆಂಬುದನ್ನು ತಿಳಿಸಿ ಅದನ್ನು ಓದುವ ಮತ್ತು ಬರೆಯುವ ಕ್ರಮ ತಿಳಿಸುವುದು.
5. ಗುಣಿತಾಕ್ಷರ ರಟ್ಟಿನಲ್ಲಿ ಗುಣಿತಾಕ್ಷರಗಳನ್ನು ಗುರುತಿಸಲು ಹೇಳಿ ಜೊತೆಗೆ ಕಂಠಪಾಠ ಮಾಡಿಸಿ.
6. ಗುಣಿತಾಕ್ಷರಗಳನ್ನು ಬಿಡಿಸಿ ಬರೆಯುವ ಕ್ರಮ ತಿಳಿಸಿ

| ಉದಾ: | **ಕೋಗಿಲೆ** | **ಕೈಗಾರಿಕೆ** |
|---|---|---|
| | ಕ್+ಓ = ಕೋ | ಕ್+ಐ=ಕೈ |
| | ಗ್+ಇ = ಗಿ | ಗ್+ಆ=ಗಾ |
| | ಲ್+ಇ = ಲೆ | ರ್+ಇ=ರಿ |

7 ಗುಣಿತಾಕ್ಷರಗಳನ್ನು ಗುರುತಿಸುವುದು ಮತ್ತು ಶಬ್ದಗಳ ಅಂತ್ಯಾಕ್ಷರಿ ಆಟ ಆಡಿಸುವುದು.

8. ಸರಳ ಪದಗಳನ್ನು ಕೊಟ್ಟು ಅದರಲ್ಲಿ ಆಯ್ದ ಅಕ್ಷರಗಳನ್ನು ಗುರ್ತಿಸುವುದು.
   ಕಮಲ, ಆಟ, ಸಮರ
9. ಅನುಸ್ವಾರದ ಪದಗಳನ್ನು ಯಾವ ರೀತಿ ಓದಬೇಕು ಎಂಬುದನ್ನು ತಿಳಿಸಿ ಉದಾ: ಅಂಕ (ಅಙಕ) ಹೆಚ್ಚಿನ ಮಾಹಿತಿಗಾಗಿ ಅಭ್ಯಾಸ ಪುಸ್ತಕ ಮಟ್ಟ 1ರ ಪುಟ ಸಂಖ್ಯೆ 33, 34ನ್ನು ನೋಡಿ.
10. ಸರಳ ಕನ್ನಡ ಭಾಗ 1ರ 6–11ರವರೆಗಿನ ಗುಣಿತಾಕ್ಷರ ಪದವಾಚನವನ್ನು ಪ್ರಾರಂಭದಲ್ಲಿಕಾಗುಣಿತ ರಟ್ಟಿನ ಸಹಾಯ ಪಡೆದು ನಂತರ ರಟ್ಟಿನ ಸಹಾಯವಿಲ್ಲದೆ ಓದುವಂತೆ ಪ್ರೋತ್ಸಾಹಿಸಿ.
11. ಅಭ್ಯಾಸ ಪುಸ್ತಕ – 1ರ ಗುಣಿತಾಕ್ಷಗಳ ಆಯ್ದ ಚಟುವಟಿಕೆಗಳನ್ನು ಕಲಿಕೆಗೆ ಅನುಗುಣವಾಗಿ ಅಳವಡಿಸಿ.

## 2.) ಪದ ರಚನೆಯ ಚಟುವಟಿಕೆಗಳು (ಅಕ್ಷರ ಮಟ್ಟ – ಆಟಗಳು)

### ಜೋಡಿ ಪದ ಆಟ

ಯಾವುದಾದರೂ ಒಂದು ಪದವನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ ಮತ್ತು ಅವುಗಳಿಂದ ಆಗುವ ಜೋಡಿ (ಪ್ರಾಸ)ಪದಗಳನ್ನು ನಿಧಾನವಾಗಿ ಹೇಳಿ. ಉದಾ:– ಏರು–ಪೇರು, ಕಾಲ–ಬಾಲ ಮುಂತಾದವು. ಬೇರೆ ಜೋಡಿ ಪದಗಳನ್ನು ಹೇಳುವಂತೆ ಹೇಳಿ. ಪ್ರತಿದಿನ ಬೇರೆ ರೀತಿಯಲ್ಲಿ ಈ ಆಟ ಆಡಲಿ. ಜೋಡಿ ಪದಗಳು ಅರ್ಥವಿರಬಹುದು ಅಥವಾ ಅರ್ಥವಿಲ್ಲದಿರಬಹುದು.
ಆಗು–ಹೋಗು, ಅದು–ಇದು

### ಆಲಿಸಿ ಬರೆಯುವ ಆಟ

ಮಕ್ಕಳಿಗೆ ಕೆಲವು ಪದಗಳನ್ನು ಹೇಳಿ. ಮಕ್ಕಳು ಆಲಿಸಿದ ಪದಗಳನ್ನು ನೆಲ ಅಥವಾ ಕಾಪಿ ಪುಸ್ತಕದಲ್ಲಿ ಬರೆಯಲಿ. ಬರೆದ ನಂತರ ಮಕ್ಕಳು ಜಾಗ ಅಥವಾ ಸ್ಥಳವನ್ನು ಬದಲಾಯಿಸುವಂತೆ ಹೇಳಿ. ಹೇಳಿದ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಲಿ. ಮಕ್ಕಲು ಒಬ್ಬರು ಇನ್ನೊಬ್ಬರ ಪುಸ್ತಕಗಳನ್ನು ಕಪ್ಪುಹಲಗೆಯನ್ನು ನೋಡಿ ಸರಿ ಪಡಿಸಲಿ.

**ಶಬ್ದಾಂತ್ಯಾಕ್ಷರಿ ಆಟಗಳು**

ಮಕ್ಕಳನ್ನು ಎರಡು ತಂಡಗಳಾಗಿ ಮಾಡಿ. ಪ್ರತಿಯೊಂದು ಸಮೂಹದ ಹೆಸರನ್ನು ಮಕ್ಕಳಿಂದ ಕೇಳಿ ಕಪ್ಪುಹಲಗೆಯ ಮೇಲೆ ಬರೆಯಿರಿ. ಉದಾ:– 'ಗುಲಾಬಿ', 'ನವಿಲು'

ಗುಲಾಬಿ ಸಮುಹ 'ರ' ಅಕ್ಷರದಿಂದ 'ರಾಮ' ಎಂದು ಹೇಳಿದರೆ, ನವಿಲು ಸಮೂಹ 'ಮ' ಅಕ್ಷರದಿಂದ 'ಮನೆ' ಎಂದು ಹೇಳಿದರೆ

ಮತ್ತೆ ಗುಲಾಬಿ ತಂಡ 'ನ' ಅಕ್ಷರದಿಂದ 'ನದಿ' ಎಂದು ಹೇಳಿ ಆಟ ನಡೆಯುತ್ತಾ ಹೋಗುವುದು. ಪ್ರತಿಯೊಂದು ಸಮೂಹಕ್ಕೂ ಸರಿಯಾದ ಪದಕ್ಕೆ ಅಂಕ ನೀಡಿ. ಕೊನೆಯಲ್ಲಿ ಇಬ್ಬರ ಅಂಕಗಳನ್ನು ಕೂಡಿಸಿ ಪ್ರೋತ್ಸಾಹಿಸಿ.

**ಪದಗಳನ್ನು ಪಟ್ಟಿ ಮಾಡುವ ಆಟ**

ಮಕ್ಕಳೊಂದಿಗೆ ಅವರಿಗೆ ಇಷ್ಟವಾಗುವ ವಸ್ತುಗಳ ಬಗ್ಗೆ ಮಾತನಾಡಿ. ಉದಾ:–ತಿಂಡಿ–ತಿನಿಸು, ಧರಿಸುವ ಬಟ್ಟೆಗಳು, ಪ್ರವಾಸ ಸ್ಥಳಗಳ ಬಗ್ಗೆ.... ಮುಂತಾದವು. ಮಕ್ಕಳು ಮೊದಲು ಮಾತನಾಡಲಿ ಮತ್ತು ಪುನಃ ಕಾಪಿ ಅಥವಾ ನೆಲದ ಮೇಲೆ ಈ ವಸ್ತುಗಳನ್ನು ಪಟ್ಟಿ ಮಾಡಿ

| | |
|---|---|
| ಪೆನ್ನು | ಸೇಬು |
| ಕಾಪಿ ಪುಸ್ತಕ | ದಾಳಿಂಬೆ |
| ಟೋಪಿ | ಮೈದಾನ |
| ಟೇಬಲ್ | ಮೈಸೂರು |

**ವಿಶೇಷ ಸೂಚನೆ : ಅಕ್ಷರ ಮಟ್ಟದ ಮಕ್ಕಳಿಗಾಗಿ ಈ ಆಟಗಳನ್ನು ನೀಡಲಾಗಿದೆ. ಅವು ಅಕ್ಷರ ಸ್ವರಗಳಿಂದ ಪದಗಳನ್ನು ರಚಿಸುವ ಮತ್ತು ಓದಿ–ಬರೆಯುವ ಸಾಮರ್ಥ್ಯವನ್ನು ಹೆಚ್ಚಿಸಲು ಸಹಾಯಕವಾಗುತ್ತದೆ. ಆದುದರಿಂದ ಈ ಆಟಗಳನ್ನು ಅಕ್ಷರ ಮಟ್ಟದ ಮಕ್ಕಳೊಂದಿಗೆ ಆಡಿ.**

## ಪದ ಮಟ್ಟ

**ಸೂಚನೆ : ಪ್ರಾರಂಭದ 2/3 ದಿನಗಳಲ್ಲಿ ಅಕ್ಷರ ಮಟ್ಟದ ಚಟುವಟಿಕೆಗಳಲ್ಲಿನ ಆಯ್ದ ಚಟುವಟಿಕೆಗಳನ್ನು ಮಾಡಿಸುವುದು.**

1. ಚಿತ್ರದ ಮೂಲಕ ಪದಗಳನ್ನು ಪಟ್ಟಿ ಮಾಡಿ ಮಾತನಾಡಿಸುವುದು.
2. ಒತ್ತಕ್ಷರಗಳನ್ನು ಕಲಿಸಿ ಜೊತೆಗೆ ತಲಕಟ್ಟಿಲ್ಲದ ಹಾಗೂ ಅಕ್ಷರ ಹೋಲದ ಭಿನ್ನರೀತಿಯ ಒತ್ತಕ್ಷರಗಳನ್ನು ಪರಿಚಯಿಸಿ.
3. ಒತ್ತಕ್ಷರವಿರುವ ಪದಗಳನ್ನು ಬಿಡಿಸಿ ಓದುವುದನ್ನು ಹಾಗೂ ಬರೆಯುವುದನ್ನು ತಿಳಿಸಿ.
   ಸೌಮ್ಯ = ಸೌ + ಮ್ + ಯ್ +ಅ,
   ಪುಸ್ತಕ = ಪು(ಸ್ + ತ್ + ಅ)ಕ
4. ರ ಒತ್ತಕ್ಷರ ಮತ್ತು ೯ ಒತ್ತಿಗಿರುವ ಅಂತರವನ್ನು ಹೇಳಿ ಅಂದರೆ, ಉಚ್ಚಾರಣೆಯನ್ನು ಪರಿಚಯಿಸಿ.
5. ಮೈಂಡ್ ಮ್ಯಾಪ್(ಮಾನಸಿಕ ಆಲೇಖ) ಚಟುವಟಿಕೆ ಮಾಡಿಸಿರಿ.
6. ಒತ್ತಕ್ಷರಗಳನ್ನೊಳಗೊಂಡ ಪದಗಳನ್ನು ಉಕ್ತಲೇಖನ ಹಾಗೂ ಸ್ವಂತ ವಾಕ್ಯ ರಚನೆ ನೀಡಿ.
7. ಸರಳ ಕನ್ನಡ ಭಾಗ 2 ಕಥಾಗುಚ್ಛದ 1–7ರವರೆಗಿನ ಕಥೆಗಳನ್ನು ವಿದ್ಯಾರ್ಥಿಗಳು ಪ್ರಾರಂಭದಲ್ಲಿ ಒತ್ತಕ್ಷರಗಳ ರಟ್ಟಿನ ಸಹಾಯದಿಂದ ನಂತರ ರಟ್ಟಿನ ಸಹಾಯವಿಲ್ಲದೆ ಓದುವಂತೆ ಪ್ರೋತ್ಸಾಹಿಸಿ.

8. 5 ರಿಂದ 8 ಪದಗಳನ್ನು ನೀಡಿ ಕಥಾರಚನೆ ಮಾಡಲು ಪ್ರೋತ್ಸಾಹನೀಡಿ.
9. ಚಿತ್ರಪಟದ ಮೂಲಕ ಕಥೆರಚನೆ ಮಾಡಿಸುವುದು.
10. ಗಾದೆಗಳು, ಒಗಟುಗಳು, ಚುಟುಕುಗಳ ಸಂಗ್ರಹ ಹಾಗೂ ದೇಹದ ಭಾಗಗಳು, ಹಣ್ಣು, ತರಕಾರಿಗಳು ಪಕ್ಷಿಗಳು, ಊರುಗಳ ಹೆಸರು, ತಿಂಗಳು, ವಾರ, ಹಬ್ಬ ತಿಂಡಿಗಳು ಅಡುಗೆ ಮನೆಯಲ್ಲಿ ಬಳಸುವ ಸಾಮಗ್ರಿಗಳು ಸ್ನಾನದ ಮನೆಯಲ್ಲಿ ಬಳಸುವ ವಸ್ತುಗಳ ಹೆಸರುಗಳನ್ನು ಮತ್ತು ಆ ವಿಷಯಗಳ ಬಗ್ಗೆ ಒಂದು ಪ್ಯಾರಾ ಬರೆಸಿ, ನಂತರ ಓದಿಸಿ.
11. ಅದಲು – ಬದಲು ಕಂಚಿನ ಕದಲು ಚಟುವಟಿಕೆ ಮಾಡಿಸುವುದು.
12. ಕುಟುಂಬ ವೃಕ್ಷ–ಸಂಬಂಧಗಳ ಪರಿಚಯ.
13. ಅಭ್ಯಾಸ ಪುಸ್ತಕ – 2ರ ಎಲ್ಲಾ ಚಟುವಟಿಕೆಗಳನ್ನು ಮಕ್ಕಳ ಕಲಿಕೆಗೆ ಅನುಗುಣವಾಗಿ ಅಳವಡಿಸಿ.

## (vi) ಪದ ಓದುವಿಕೆ

ಅಕ್ಷರ 'ಬಿಡಿಸಿ–ಜೋಡಿಸಿ' ಪದ ಓದು ಚಟುವಟಿಕೆಯಿಂದ ಮಕ್ಕಳಲ್ಲಿ ಸ್ವರ, ವ್ಯಂಜನಗಳನ್ನು ಕೂಡಿಸಿ ಸಂಯುಕ್ತಾಕ್ಷರಗಳನ್ನು ಗುರುತಿಸಿ/ಉಚ್ಚರಿಸಿ ಬರೆಯುವ ಜ್ಞಾನ ವಿಕಾಸವಾಗುತ್ತದೆ. ಪ್ರತಿದಿನವೂ ಮೌಖಿಕ ಮತ್ತು ಲಿಖಿತರೂಪದಲ್ಲಿ ಈ ಚಟುವಟಿಕೆಯಲ್ಲಿ ತೊಡಗಿಸಿ.

**ಅಕ್ಷರ ಬಿಡಿಸಿ ಜೋಡಿಸಿ ಪದ ಓದು–ಬರಹ**

**ಮೌಖಿಕವಾಗಿ**

| ಬಿಡಿಸು | ಜೋಡಿಸು |
|---|---|
| ನೀರು – ನೀ ರು | ನ ದಿ – ನದಿ |
| ರಾತ್ರಿ – ರಾ ತ್ರಿ | ಕೊ ಠ ಡಿ – ಕೊಠಡಿ |
| ಧರತಿ – ಧ ರ ತಿ | ಕ ಮ ಲ – ಕಮಲ |

**ಲಿಖಿತ ರೂಪದಲ್ಲಿ**

| ಬಿಡಿಸು | ಜೋಡಿಸು |
|---|---|
| ಧರ್ಮ – ಧ ರ್ಮ | ಜ ನ ರು – ಜನರು |
| ಜಲಜ – ಜ ಲ ಜ | ಲೇ ಖ ನಿ – ಲೇಖನಿ |
| ಹಕ್ಕಿ – ಹ ಕ್ಕಿ | ಕೋ ಳಿ – ಕೋಳಿ |

**ಸೂಚನೆ**: ಇತರ ಅಕ್ಷರ ಮತ್ತು ಪದಗಳನ್ನು ಉಪಯೋಗಿಸಿ ಚಟುವಟಿಕೆ ಮುಂದುವರೆಸಿ.

### ಪದ ಓದುವುದು ಹೇಗೆ ?

ಈ ಕೆಳಗಿನ ಐದು ರೀತಿಗಳಲ್ಲಿ ಯಾವುದೇ ಪದವನ್ನು ಓದಬಹುದು.

- ಯಾವುದೇ ಪದವನ್ನು ಅಕ್ಷರ ಮತ್ತು ಮಾತ್ರೆಗಳಾಗಿ ಬಿಡಿಸಿ ಓದುವುದು.
  ಉದಾ: ವಿಲಾಸಪುರ = (ವ + ಇ) + (ಲ + ಆ) + ಸ + (ಪ + ಉ) + ರ
- ಯಾವುದೇ ಪದವನ್ನು ತುಂಡಾಗಿ ಅಥವಾ ಖಂಡಗಳಲ್ಲಿ ವಿಭಜಿಸಿ ಓದುವುದು
  ಉದಾ: ವಿಲಾಸಪುರ = ವಿ+ಲಾಸ + ಪುರ ಅಥವಾ ವಿಲಾಸ + ಪುರ
- ಪದಗಳನ್ನು ಸುಲಭವಾಗಿ ಅವುಗಳ ಅರ್ಥದೊಂದಿಗೆ ಗುರುತಿಸುವುದು.
  ಮಗುವಿಗೆ ಆ ಶಬ್ದದ ಪರಿಚಯವಿದೆ. ಏಕೆಂದರೆ ಮಗುವು ಆ ಶಬ್ದವನ್ನು ಹಲವು ಬಾರಿ ನೋಡಿಯಾಗಿದೆ.
- ಮತ್ತೊಂದು ಪದದೊಂದಿಗೆ ಸಂಬಂಧ ಕಲ್ಪಿಸುವುದು,
  ಹಾಳೆ, ತಾಳೆ, ನಾಳೆ.. ಇತ್ಯಾದಿ ಒಂದೇ ಧ್ವನಿಯುಳ್ಳ ಪದಗಳು.
- ಮಗುವು ಕೆಲವೇ ಅಕ್ಷರಗಳನ್ನು ಮಾತ್ರ ಗುರುತಿಸಬಲ್ಲದಾದರೂ ಸಂದರ್ಭದ ಆಧಾರದ ಮೇಲೆ ಯಾವುದೇ ಪದವನ್ನು ಅದರ ಅರ್ಥ ಮತ್ತು ಅಕ್ಷರ ವಿನ್ಯಾಸದೊಂದಿಗೆ ಓದಬಹುದಾಗಿದೆ.
  ಆದ್ದರಿಂದ ಮಕ್ಕಳ ಜೊತೆ ಹೆಚ್ಚು ಹೆಚ್ಚು ಪದಗಳನ್ನು ಉಪಯೋಗಿಸಿ ಆಟವಾಡಿಸಿ.

# 3.) ಪದ ಸಂಪತ್ತಿಗಾಗಿ ಚಟುವಟಿಕೆಗಳು (ಪದ ಮಟ್ಟ – ಆಟಗಳು)

**ಸಮೃದ್ಧವಾದ ಪದ ಸಂಪತ್ತು ಓದು–ಬರಹ ಸುಂದರವಾಗಿಸಲು ಮಹತ್ವಪೂರ್ಣವಾದುದು. ಈ ಕೆಳಗೆ ಪದ ಸಂಪತ್ತಿನ ವಿವಿಧ ಆಟಗಳನ್ನು ನೀಡಲಾಗಿದೆ ಪ್ರತಿದಿನ ಪದ ಮಟ್ಟದ ಮಕ್ಕಳೊಂದಿಗೆ ಒಂದೊಂದು ಆಟವಾಡಿಸಿ.**

### ಶಬ್ದಕ್ಕೆ ಸಂಬಂಧಿಸಿದ ಪದ ರಚನೆ ಆಟ

ಒಂದು ಪದವನ್ನು ಹೇಳಿ ಅದನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ, ಪುನಃ ಅದೇ ಪದಕ್ಕೆ ಸಂಬಂಧಿಸಿದಂತೆ ಬೇರೆ ಪದಗಳನ್ನು ಹೇಳಲು ಮತ್ತು ಬರೆಯಲು ಹೇಳಿ.

ಉದಾ:– ಮಾರುಕಟ್ಟೆ–ಅಂಗಡಿ, ಸಾಮಾನು, ಆಟಿಕೆ, ಮಿಠಾಯಿ, ಕಾಡು, ಮನುಷ್ಯ, ಮಕ್ಕಳು, ಸಂತೋಷ, ಆಟೋ, ಬಸ್ಸು ಮುಂತಾದವು. ಈ ಚಟುವಟಿಕೆಯನ್ನು ಮಕ್ಕಳ ಸಮೂಹದಲ್ಲಿ ಮಾಡಿಸಬಹುದು. ಯಾವ ಸಮೂಹದ ಮಕ್ಕಳು ಹೆಚ್ಚು ಪದಗಳನ್ನು ಹೇಳುತ್ತದೋ ಅ ಸಮೂಹ ಗೆದ್ದ ಹಾಗೆ ಎಂದು ಹೇಳಬಹುದು.

ಸೂಚನೆ :– ಮಕ್ಕಳು ಹೇಳುವ ಪದಗಳಿಂದ ವಾಕ್ಯಗಳನ್ನು ಮಾಡಿಸುವುದು.

### ಅಪೂರ್ಣ ವಾಕ್ಯವನ್ನು ಪೂರ್ಣಗೊಳಿಸುವ ಆಟ

ಪ್ಯಾರಾಗ್ರಾಫ್‌ನಿಂದ ಅಥವಾ ಕಥೆಯ ಪುಸ್ತಕದಿಂದ ಆಯ್ದ ಕೆಲವು ವಾಕ್ಯಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ. ಅವುಗಳಲ್ಲಿ ಕೆಲವು ಪದಗಳು ಇಲ್ಲದಂತಾಗಲಿ ಮಕ್ಕಳಿಂದ ಆ ಅಪೂರ್ಣ ವಾಕ್ಯಗಳನ್ನು ಪೂರ್ಣಗೊಳಿಸುವಂತೆ ಹೇಳಿ. ಉದಾ:– ಈಗ ರಾಜು ________ ಹೋದನು. ಅಲ್ಲಿ ಅವನು ಒಂದು ________ನೋಡಿದ. ಅವನು ಬಹಳ ________ ಆಗಿದ್ದ.

### ತಪ್ಪು ಸರಿಪಡಿಸುವ ಆಟ

ಇದಕ್ಕೆ ಸಂಬಂಧಿಸಿದಂತೆ ಕಾರ್ಡು ನೀಡಿ. ಆ ವಾಕ್ಯದಲ್ಲಿ ಲಿಂಗ, ವಚನ, ಪೂರ್ಣವಿರಾಮ ಮತ್ತು ಅಲ್ಪವಿರಾಮಗಳನ್ನು ತಪ್ಪು ಮಾಡಿ, ಪುನಃ ಮಕ್ಕಳಿಗೆ ಆ ವಾಕ್ಯಗಳನ್ನು ಓದಿ ಸರಿಪಡಿಸಿ ಬರೆಯುವಂತೆ ಹೇಳಿ.

ಉದಾ:– ಸುರೇಶ ಮನೆಯಲ್ಲಿ ಮಲಗಿತ್ತು. ಆಗ ಒಂದು ಬೆಕ್ಕು ಬಂದನು.

ಸರಿಯಾದ ರೂಪ :– ಸುರೇಶನು ಮನೆಯಲ್ಲಿ ಮಲಗಿದ್ದ. ಆಗ ಬೆಕ್ಕು ಬಂದಿತು.

ಈ ಆಟವನ್ನು ಪ್ಯಾರಾಗ್ರಾಫ್ ನೊಂದಿಗೆ ಆಡಿ.

### ವಚನ ಬದಲಿಸುವ ಆಟ

ಸಮೂಹದಲ್ಲಿ ಒಂದು ಪದ ಹೇಳಿ.

ಉದಾ:– ಮಕ್ಕಳನ್ನು ಕೇಳಿ ಒಂದು ಕುರಿ ಇದ್ದರೆ ಕುರಿ ಎನ್ನುತ್ತೇವೆ ಮತ್ತು ಒಂದಕ್ಕಿಂತ ಹೆಚ್ಚು ಇದ್ದರೆ ನಾವು ಅವುಗಳನ್ನು ಏನು ಹೇಳುತ್ತೇವೆ? ಕುರಿಗಳು. ಪುನಃ ಪ್ರತಿಯೊಂದು ಮಗುವಿಗೂ ಇದೇ ರೀತಿ ಪದಗಳನ್ನು ಸೂಚಿಸಿ ನೆಲ/ನೋಟ್ ಪುಸ್ತಕದಲ್ಲಿ ಬರೆಯುವಂತೆ ಹೇಳಿ. ಈ ಸಂದರ್ಭದಲ್ಲಿ ಮಕ್ಕಳ ಬಳಿ ಆಗಾಗ್ಗೆ ಹೋಗಿ ಅವರು ಬರೆದಿರುವುದನ್ನು ಓದುವಂತೆ ಹೇಳಿ. ಇದೇ ರೀತಿ ಸ್ತ್ರೀಲಿಂಗ–ಪುಲ್ಲಿಂಗ ಮತ್ತು ವಿರುದ್ಧಾರ್ಥಕಪದಗಳನ್ನು ಮಾಡಿಸಿ.

### ವಾಕ್ಯ ರಚನೆ ಆಟ

ಚಿಕ್ಕ–ಚಿಕ್ಕ ಸಮೂಹಗಳಲ್ಲಿ ಪದಗಳಿಂದ ವಾಕ್ಯ ಮಾಡುವ ಕಾರ್ಡುಗಳನ್ನು ಕೊಡಿ. ಪುನಃ ಅದರಿಂದ ವಾಕ್ಯ ಮಾಡಿ ಕಪ್ಪು ಹಲಗೆಯ ಮೇಲೆ ಬರೆಯಿರಿ ಮತ್ತು ಓದಿ. ಮಕ್ಕಳಿಗೆ ಕಾರ್ಡಿನಲ್ಲಿರುವ ಶಬ್ದಗಳಿಂದ ನೆಲ ಅಥವಾ ನೋಟ್ ಪುಸ್ತಕದಲ್ಲಿ ವಾಕ್ಯ ಬರೆಯುವಂತೆ ಹೇಳಿ.

ಉದಾ:– ಬಟ್ಟೆ

ಬಟ್ಟೆಗಳು ಹಲವು ರೀತಿಯಾಗಿರುತ್ತವೆ

### ವರ್ಣಿಸುವ ಆಟ

ಯಾವುದಾದರೂ 4–5 ಪದ/ವಿಷಯವನ್ನು ಕಪ್ಪು ಹಲಗೆಯಲ್ಲಿ ಬರೆಯಿರಿ. ಅವುಗಳಲ್ಲಿ ಮಕ್ಕಳಿಗೆ ಇಷ್ಟವಾದ ಯಾವುದಾದರೊಂದು ಪದ/ವಿಷಯದ ಬಗ್ಗೆ ಮಂಡನೆ ಮಾಡಲು ಮತ್ತು ಬರೆಯಲು ಹೇಳಿ. ಉದಾ:–ಆಕಾಶ, ಫೋನ್, ಅಡುಗೆ–ಮನೆ ಮುಂತಾದವು. ಅಡುಗೆ ಮನೆಯಲ್ಲಿ ಅಡುಗೆ ಮಾಡಲಾಗುತ್ತದೆ. ಇಲ್ಲಿ ಅಡುಗೆ ಮಾಡಲು ಬೇಕಾಗುವ ಎಲ್ಲ ವಸ್ತುಗಳು ಸಿಗುತ್ತವೆ.

**ಸೂಚನೆ :– ಕೆಲವೊಂದು ಆಟಗಳಿಗೆ ಮಿಂಚುಪಟ್ಟಿಗಳ ತಯಾರಿಕೆ ಪ್ರಮುಖವಾಗಿದ್ದು ಅದನ್ನು ತಯಾರಿಸಿಕೊಂಡು ಆಟವಾಡಿಸುವುದು ಸೂಕ್ತ.**

## (vii) ಚಾರ್ಟ್ ವಾಚನ



ಅಕ್ಷರರಟ್ಟು / ಚಾರ್ಟನ್ನು ಬಳಸಿ ಅಕ್ಷರ ಗುರುತಿಸಿಕೊಳ್ಳುವ ಅಭ್ಯಾಸ ನೀಡಿದರೆ ಅತಿ ಶೀರ್ಘವಾಗಿ ಪದ ಓದುವಿಕೆ ಸಾಧ್ಯವಾಗುತ್ತದೆ.

ಪ್ರಾರಂಭಿಕ, ಅಕ್ಷರ ಮತ್ತು ಪದ ಮಟ್ಟದ ಮಕ್ಕಳಿಗೆ ಅಕ್ಷರಗಳ ಮಾದರಿ, ಅವುಗಳ ಶಬ್ದ (ಧ್ವನಿ) ಮತ್ತು ಉಚ್ಚಾರಣೆಯನ್ನು ಪರಿಚಯಿಸಿ ಅಕ್ಷರದಿಂದ ಪದ, ಪದದಿಂದ ವಾಕ್ಯ ಹೀಗೇ ಹಂತ ಹಂತವಾಗಿ ಕಲಿಸಬಹುದು. ಮುಂದುವರೆದ ಹಂತದ ಮಕ್ಕಳು ಪ್ರಾರಂಭಿಕ ಹಂತದ ಮಕ್ಕಳಿಗೆ ಪದರಚನೆ ಮತ್ತು ಸರಳ ಪ್ಯಾರವನ್ನು ಓದಲು ಸಹಾಯ ಮಾಡುವ ಉದ್ದೇಶದಿಂದ ಈ ಚಟುವಟಿಕೆಯನ್ನು ದೊಡ್ಡ ಗುಂಪಿನ ಚಟುವಟಿಕೆಯಾಗಿ ಮಾಡಬೇಕಾಗುತ್ತದೆ.

**ಪ್ರಸ್ತುತ ಪಡಿಸುವ ವಿಧಾನ :**



* ಶಿಕ್ಷಕರು ಮೊದಲನೇ ಹಂತದಲ್ಲಿ ಚಾರ್ಟ್ ಓದುವಾಗ ಆಯಾ ಅಕ್ಷರದ ಕೆಳಗೆ ಬೆರಳಿಟ್ಟು ಸ್ಪಷ್ಟ ಉಚ್ಚಾರಣೆ, ಧ್ವನಿ ಏರಿಳಿತದೊಂದಿಗೆ ನಿಧಾನವಾಗಿ ಓದಲಿ. ಮಕ್ಕಳು ತಮ್ಮ ಚಾರ್ಟ್‌ಗಳನ್ನಿಟ್ಟುಕೊಂಡು ಪುನರುಚ್ಚರಿಸದೇ ಶಿಕ್ಷಕರನ್ನು ಅನುಸರಿಸಲಿ.

* ವರ್ಣಮಾಲೆಯನ್ನು ಅಕ್ಷರ ರಟ್ಟಿನಿಂದ ಪರಿಚಯಿಸಿ ಹ್ರಸ್ವ-ದೀರ್ಘ ಸ್ವರಗಳು, ಅಲ್ಪಪ್ರಾಣ, ಮಹಾಪ್ರಾಣ, ವರ್ಗೀಯ ಅವರ್ಗೀಯ ವ್ಯಂಜನಗಳು ಯಾವುವು ಎಂದು ತಿಳಿಸಿ.

* ಶಿಕ್ಷಕರು ಚಾರ್ಟನ್ನು ಅಡ್ಡವಾಗಿ, ಲಂಬವಾಗಿ ಪ್ರತಿ ಅಕ್ಷರವನ್ನು ತೋರಿಸುತ್ತಾ ಓದಿ. (ಮೊದಲ ಮೂರು ಅಂಶಗಳನ್ನು ಶಿಕ್ಷಕರು ಪ್ರಾರಂಭಿಕ ದಿನಗಳಲ್ಲಿ ಮಾತ್ರ ಅನುಸರಿಸಲಿ).

* ಒಂದು ಪದದ ಅಕ್ಷರ ಬರೆದು / ಬಿಲ್ಲೆಯನ್ನು ತೋರಿಸಿ ಮತ್ತೊಂದನ್ನು ಸೇರಿಸಿ ಹೊಸ ಪದ ರಚಿಸಲು ತಿಳಿಸಿ. ಉದಾ : ಅ ರ – ಅ ರ ಸ.

* ಹೀಗೇ ಎರಡು ಪದಗಳ ಬಿಲ್ಲೆಗಳನ್ನು ಸೇರಿಸಿದಾಗ ಅನೇಕ ಪದಗಳನ್ನು (ಸರಳಾಕ್ಷರದ ಪದಗಳು) ರಚಿಸಬಹುದೆಂದು ತಿಳಿಸಿ.

ಅ ರ ಸ – ಅರ, ರಸ, ಸರ, ವನ, ನವ, ಜನ, ವಜ, ಸಜ, ರಜ, ವರ, ಜರ
ವ ನ ಜ – ಅವನ, ಅವರ, ಜನರ, ಜವರ, ನರಸ, ವರನ, ಅವಸರ, ನವರಸ

* ವರ್ಣಮಾಲೆಯ ಪರಿಚಯದ ನಂತರ ಗುಣಿತಾಕ್ಷರಗಳು ಹೇಗೆ ಆಗುವುದೆಂಬುದನ್ನು ತಿಳಿಸಿ ಅದನ್ನು ಓದುವ ಮತ್ತು ಬರೆಯುವ ಕ್ರಮವನ್ನು ಶಿಕ್ಷಕರು ಹೇಳಲಿ.

* ಶಿಕ್ಷಕರು ಸ್ವರಗಳನ್ನು ಒಳಗೊಂಡಂತೆ ಕಾಗುಣಿತ ಪದಗಳನ್ನು ಕಪ್ಪು ಹಲಗೆಯಲ್ಲಿ ಬರೆಯುವಂತೆ ಪ್ರೇರೇಪಿಸುವುದು. ಉದಾ : ಮಾಲ : ಮ್+ಅ = ಮಾ, ಲ್+ಅ = ಲ, ಮಾ ಲ = ಮಾಲ ಹೀಗೆಯೇ (ಬೇರೆ ಬೇರೆ ಪದಗಳನ್ನು ಅಭ್ಯಾಸ ಮಾಡಿಸಿ).

* ಪ್ರಾರಂಭಿಕ ಮತ್ತು ಮುಂದುವರೆದ ಹಂತದ ಮಕ್ಕಳನ್ನೊಳಗೊಂಡಂತೆ (4ರಿಂದ 5) ಸಣ್ಣ ಗುಂಪುಗಳನ್ನು ಮಾಡಿ ಕಾಗುಣಿತಾಕ್ಷರ ಚಾರ್ಟ್‌ನ್ನು ಬಳಸಿಕೊಂಡು ಸಾಧ್ಯವಾದಷ್ಟು ಪದಗಳ ರಚನೆ ಮಾಡಲು ಶಿಕ್ಷಕರು ಹೇಳಲಿ. ನಂತರ ಗುಂಪುಗಳ ಮಧ್ಯೆ ಸ್ಪರ್ಧೆ ಏರ್ಪಡಿಸಿ ಯಾವ ಗುಂಪು ಹೆಚ್ಚು ಅರ್ಥಪೂರ್ಣ ಪದಗಳನ್ನು ರಚಿಸುವರೋ ಆ ಗುಂಪನ್ನು ಶಿಕ್ಷಕರು ವಿಜೇತರು ಎಂದು

**ಏಕದಿಂದ ಅನೇಕ**

ಯಾವುದಾದರೊಂದು ಅಕ್ಷರವನ್ನು ಬೋರ್ಡ್ ಮೇಲೆ ಬರೆಯಿರಿ. ಉದಾಹರಣೆಗೆ–'ಕ'. ಕ ಅಕ್ಷರದಿಂದ ಆರಂಭವಾಗುವ ಪದಗಳನ್ನು ಹೇಳುವಂತೆ ಮಕ್ಕಳಿಗೆ ಸೂಚಿಸಿ. ಮಕ್ಕಳು ಹೇಳುವ ಪದಗಳನ್ನು ಬೋರ್ಡ್ ಮೇಲೆ ಬರೆಯಿರಿ. ಕರ, ಕದ, ಕಸ, ಕಮಲ ಕರಡಿ ಇತ್ಯಾದಿ. ಇದೇ ರೀತಿ ಮಕ್ಕಳು ಒಬ್ಬರ ನಂತರ ಒಬ್ಬರು 'ಕ' ಅಕ್ಷರದಿಂದ ಶುರುವಾಗುವ ಪದಗಳನ್ನು ಹೇಳಲಿ ಮತ್ತು ಶಿಕ್ಷಕರು ಅವುಗಳನ್ನು ಬೋರ್ಡ್ ಮೇಲೆ ಬರೆಯಲಿ

**ಕಾಗುಣಿತಾಕ್ಷರದ ಆಟ**

ಕಾಗುಣಿತದ ಎರಡು/ನಾಲ್ಕು ಸಾಲುಗಳನ್ನು ಮಕ್ಕಳಿಗೆ ಬೋರ್ಡಿನ ಮೇಲೆ ಬರೆಯಿರಿ. ಆ ಸಾಲುಗಳ ಕಾಗುಣಿತಗಳಿಂದ ಕೆಲವು ಪದಗಳನ್ನು ಶಿಕ್ಷಕರೇ ಮಾಡಿ ಮಕ್ಕಳಿಗೆ ತಿಳಿಸಲಿ. ನಂತರ ಮಕ್ಕಳೇ ಕಾಗುಣಿತಗಳಿಂದ ಪದಗಳನ್ನು ರಚಿಸಿ ನೋಟ್ ಪುಸ್ತಕದಲ್ಲಿ ಅಥವಾ ನೆಲದ ಮೇಲೆ ಬರೆಯುವಂತೆ ಹೇಳಿ,

## (viii) ಬರವಣಿಗೆ – ಪ್ರಾರಂಭಿಕ, ಅಕ್ಷರ ಮತ್ತು ಪದಮಟ್ಟ

ಶಿಕ್ಷಕರು ದೊಡ್ಡ ಗುಂಪಿನಲ್ಲಿ ಎಲ್ಲ ಮಕ್ಕಳಿಗೂ ಮಾತನಾಡುವ ಅವಕಾಶ ದೊರೆಯುವ ರೀತಿಯಲ್ಲಿ ಯಾವುದಾದರೊಂದು ವಿಷಯವನ್ನು ಕುರಿತು ಮಾತನಾಡಬೇಕು. ಮಾತುಕತೆಯಾದ ನಂತರ ಮಕ್ಕಳನ್ನು ಅವರವರ ಮಟ್ಟಕ್ಕೆ ಅನುಸಾರವಾಗಿ ಸಣ್ಣ–ಸಣ್ಣ ಗುಂಪಿನಲ್ಲಿ ಕೂರಿಸಿ ಆಡಿದ ಮಾತುಕತೆಯ ಬಗ್ಗೆ ಬರೆಯಲು ಹೇಳಿ. ವಿವಿಧ ಮಟ್ಟದ ಮಕ್ಕಳೊಂದಿಗೆ ಈ ಕೆಳಗಿನ ರೀತಿಗಳಲ್ಲಿ ಬರವಣಿಗೆಯ ಪ್ರಕ್ರಿಯೆಯನ್ನು ಮಾಡಿಸಬಹುದು.

•**ಪ್ರಾರಂಭಿಕ ಮಟ್ಟ:** ಯಾವ ವಿಷಯದ ಬಗೆಗೆ ಮಾತುಕತೆ ಆಗಿದೆಯೋ ಅದರ ಚಿತ್ರವನ್ನು ಬರೆಯಲು ಹೇಳಿ ಹಾಗೂ ಅದನ್ನು ಕುರಿತಾಗಿ ತನಗೆ ತೋಚಿದ ಪದಗಳನ್ನು ಬರೆಯಲು ಹೇಳಿ. ಒಂದು ವೇಳೆ ಮಗುವಿಗೆ ಸ್ವತಃ ಬರೆಯಲು ಸಾಧ್ಯವಾಗದಿದ್ದರೆ ಅಥವಾ ತಪ್ಪು ಬರೆದರೆ ಆಗ ಮಗುವನ್ನು 'ನೀನು ಏನು ಬರೆದಿರುವೆ'? ಎಂದು ಕೇಳಿ. ಸ್ವತಃ ಸರಿಯಾದ ಪದವನ್ನು ಬರೆದು ತೋರಿಸಿ ಹೇಳಿ.

•**ಅಕ್ಷರ ಮಟ್ಟ :** ಮಾತುಕತೆಯ ಬಗ್ಗೆ ಮಕ್ಕಳಿಗೆ ಮನಸ್ಸಿನಲ್ಲಿ ಯೋಚಿಸಿ ಏನಾದರೂ ಬರೆಯಲು ಹೇಳಿ. ಮಕ್ಕಳು ಬರೆಯುವುದರಲ್ಲಿ ತಪ್ಪು ಮಾಡಿದರೆ ಆಗ ಕಾಗುಣಿತದ ನೆರವಿನಿಂದ ತಪ್ಪನ್ನು ಸರಿಪಡಿಸಿ.

•**ಪದದ ಮಟ್ಟ:** ಮಕ್ಕಳಿಗೆ ಯಾವುದಾದರೂ ವಿಷಯದ ಮೇಲೆ ಕೆಲವು ವಾಕ್ಯಗಳನ್ನು ಬರೆಯುವಂತೆ ಹೇಳಿ. ಪದಮಟ್ಟದ ಮಕ್ಕಳು ಬರೆಯುವಾಗ ವಾಕ್ಯರಚನೆ, ಕಾಗುಣಿತ ಮತ್ತು ವಿರಾಮ ಚಿಹ್ನೆಗಳಿಗೆ ಸಂಬಂಧಿಸಿದಂತೆ ಅನೇಕ ತಪ್ಪುಗಳನ್ನು ಮಾಡುತ್ತಾರೆ. ಈ ಮಕ್ಕಳಿಗೆ ಉಚ್ಚಾರಣೆಯೊಂದಿಗೆ ತಪ್ಪುಗಳನ್ನು ಸರಿಪಡಿಸಲು ಸಹಕರಿಸಿ. (ಕಾಗುಣಿತವನ್ನು ಅವಶ್ಯಕತೆಗೆ ತಕ್ಕಂತೆ ಉಪಯೋಗಿಸಿ)

### ಸಮುದಾಯದಲ್ಲಿ ಮಕ್ಕಳ ಕಲಿಕೆಯ ಬಗ್ಗೆ ಅರಿವು ಮೂಡಿಸಲು ಕೆಲವು ಸಲಹೆಗಳು

* ಎಸ್.ಡಿ.ಎಂ.ಸಿ. ಹಾಗೂ ಪೋಷಕರ ಸಭೆಯಲ್ಲಿ ಮಕ್ಕಳ ಓದಿನ ಸಾಮರ್ಥ್ಯದ ಬಗ್ಗೆ ಪೋಷಕರಲ್ಲಿ ಅರಿವು ಮೂಡಿಸುವುದು.
* ರಾಷ್ಟ್ರೀಯ ಹಬ್ಬ, ಪ್ರತಿಭಾ ಕಾರಂಜಿ, ಶಾಲಾ ವಾರ್ಷಿಕೋತ್ಸವ, ಸಮುದಾಯದತ್ತ ಶಾಲೆ ಹಾಗೂ ಇತರೆ ಸಭೆ ಸಮಾರಂಭಗಳಲ್ಲಿ ಮಕ್ಕಳ ಪ್ರಗತಿಯ ಬಗ್ಗೆ ತಿಳಿಸಿ ಪ್ರೋತ್ಸಾಯಿಸುವುದು.
* ಶಿಕ್ಷಣಕ್ಕೆ ಸಂಬಂಧಿಸಿದ ಯಾವುದೇ ಕಾರ್ಯಕ್ರಮಗಳು ನಡೆದರೂ ಅದು ಮಕ್ಕಳ ಪ್ರಗತಿಗೇ ಎಂದು ಶಿಕ್ಷಕರು ಪೋಷಕರಲ್ಲಿ ಅರಿವು ಮೂಡಿಸಿ ಆ ಕಾರ್ಯಕ್ರಮಗಳ ಉದ್ಘಾಟನೆಗೆ ಪೋಷಕರನ್ನು ತಪ್ಪದೇ ಆಹ್ವಾನಿಸಿ.
* ಓದು ಕರ್ನಾಟಕ ಕಾರ್ಯಕ್ರಮ ನಡೆಯುವ ಮೊದಲು, 30 ದಿನಗಳ ನಂತರ ಹಾಗೂ ಕಾರ್ಯಕ್ರಮದ ಕೊನೆಯಲ್ಲಿ ಮಕ್ಕಳ ಪ್ರಗತಿಯನ್ನು ಪೋಷಕರಿಗೆ/ಎಸ್.ಡಿ.ಎಂ.ಸಿ. ಅವರಿಗೆ ತಿಳಿಸುವುದು.
* ಓದು ಕರ್ನಾಟಕ ಶಾಲಾ ಪ್ರಗತಿ ಹಾಳೆಯನ್ನು ಪ್ರತಿ ಶಾಲೆಯ ಸೂಚನಾ ಫಲಕದಲ್ಲಿ ಪ್ರದರ್ಶಿಸುವುದು.

### ವೃತ್ತದ ಆಟಗಳು

**ವರ್ಣಮಾಲೆ ಆಟಗಳು :** ಅಕ್ಷರ ಬಿಲ್ಲೆಗಳನ್ನು ಸುತ್ತಲೂ ಹರಡಿ ಮಕ್ಕಳು ಸುತ್ತುವಂತೆ ತಿಳಿಸಿ ಅವರು ಸುತ್ತುತ್ತಿದ್ದಂತೆ ನಿಲ್ಲಿ ಎಂದು ಸೂಚಿಸಿ. ಅವರು ನಿಂತಿರುವ ಸ್ಥಳದಲ್ಲಿರುವ ಅಕ್ಷರವನ್ನು ಹೇಳುವಂತೆ ಪ್ರೇರೇಪಿಸಿ. ನಂತರ ಮಕ್ಕಳಿಂದ ಪದಗಳನ್ನು ಹೇಳಿಸಿ. ಹೀಗೆ ಮುಂದುವರೆದು ಸ್ವರಗಳು, ವ್ಯಂಜನಗಳು, ಅನುನಾಸಿಕ ಮತ್ತು ಅವರ್ಗೀಯ ವ್ಯಂಜನಾಕ್ಷರಗಳ ಒಟ್ಟು ಅಕ್ಷರಗಳ ಗುಂಪಿನಲ್ಲಿ ನಿಲ್ಲಲು ಸೂಚಿಸಿ. ಉದಾ : ಸ್ವರಗಳು–15, ವ್ಯಂಜನಗಳು–25.

**ಪದ ರಚನೆ ಆಟ : –** ಮಕ್ಕಳು ಹಲವು ವೃತ್ತಗಳನ್ನು ರಚಿಸಿ ಅವುಗಳಲ್ಲಿ ಅವರಿಗೆ ಇಷ್ಟವಾದ ಅಕ್ಷರಗಳನ್ನು ಬರೆದು ಯಾವುದಾದರೂ ಮೂರು ಅಕ್ಷರ ಬಿಲ್ಲೆಗಳನ್ನು ಹರಡಲಿ. ಹರಡಿದ ಅಕ್ಷರದ ಮೊದಲ ಅಕ್ಷರದಿಂದ ಪದ ರಚನೆಯನ್ನು ಮಾಡಲು ಪ್ರೇರೇಪಿಸಿ. ಇದೇ ರೀತಿ ಬೇರೆ ಬೇರೆ ಆಟಗಳನ್ನು ವೃತ್ತದಲ್ಲಿ ಆಡಿಸಿ.



# 6. ಮುಂದುವರೆದ ಹಂತದ (Advance level) ಚಟುವಟಿಕೆಗಳು

ಪ್ರಾರಂಭಿಕ / ಅಕ್ಷರ / ಪದಮಟ್ಟದ ಪ್ರಾರಂಭಿಕ ಹಂತವನ್ನು ಮುಗಿಸಿ ಪ್ಯಾರಾ / ಕಥಾಮಟ್ಟವನ್ನು ತಲುಪಿದ ಮಕ್ಕಳಿಗೆ **"ಮುಂದುವರೆದ ಹಂತ"**ದ (Advance level) ಚಟುವಟಿಕೆಗಳನ್ನು ನೀಡಬೇಕು.

## (i) ಪ್ರತಿ ದಿನ ಮಾಡಿಸಬೇಕಾದ ಚಟುಚಟಿಕೆಗಳು.

| ವಿಷಯ | ಕಥೆಗೆ ಸಂಬಂಧಿಸಿದ ಚಟುವಟಿಕೆಗಳು | |
|---|---|---|
| ಕಥಾ ಓದು | * ಕಥೆಯ ಶೀರ್ಷಿಕೆಯ ಬಗ್ಗೆ ಚರ್ಚೆ ಅಥವಾ ಹರಟೆ<br>* ಆದರ್ಶ ವಾಚನ (ಶಿಕ್ಷಕರು ಹಾವ ಭಾವದೊಂದಿಗೆ)<br>* ನನ್ನ ಹಾಗೆ ಯಾರು ಓದುತ್ತೀರಿ? ಎಂದು ಕೇಳಿ ಆಯ್ಕೆ ಮಕ್ಕಳಿಂದ ವಾಚನ.<br>* ಸಣ್ಣ ಸಣ್ಣ ಗುಂಪುಗಳಾಗಿ ಮಾಡಿ ಕಥೆಯ ಮೌನ ವಾಚನ ಮಾಡಿಸುವುದು.<br>* ಕಥೆಗೆ ಸಂಬಂಧಿಸಿದಂತೆ ಚರ್ಚೆ – (ಏನು, ಏಕೆ, ಹೇಗೆ) | * ಮಾನಸಿಕ ಆಲೇಖದಿಂದ ಕಥೆಯ ಪ್ರಾರಂಭದಿಂದ ಅಂತ್ಯದ ವರೆಗೂ ಬರುವ ಪದಗಳನ್ನು ಕಪ್ಪು ಹಲಗೆಯಲ್ಲಿ ಬರೆಸುವುದು.<br>* ಕಥೆಯನ್ನು ಆಧರಿಸಿದ ಪದಗಳನ್ನು ಬಳಸಿ ಕಥೆ ಹೇಳಿಸುವುದು ಮತ್ತು ಬರೆಸುವುದು.<br>* ನಾಲ್ಕು ಪ್ರಶ್ನೆ ನೀಡಿ ಚಿಕ್ಕ ಚಿಕ್ಕ ಗುಂಪಿನಲ್ಲಿ ಚರ್ಚಿಸಿ, ಉತ್ತರ ನೀಡಲು ಪ್ರೇರೇಪಿಸುವುದು. (ಏಕೆ, ಏನು, ಅನುಭವ, ಅಧಿಕ ವಿಷಯ).<br>* ಗುಂಪುವಾರು ಪ್ರಸ್ತುತಿ ಮಾಡುವುದು.<br>* ಪಾಠಕ್ಕೆ ಸಂಬಂಧಿಸಿದ ಪ್ರಶ್ನೆ ಅಭ್ಯಾಸ |
| | **ಅಭ್ಯಾಸ ಪುಸ್ತಕ** | **ಪಾತ್ರಾಭಿನಯ** |
| ಅಭ್ಯಾಸ ಪುಸ್ತಕ ಮತ್ತು ಪಾತ್ರಾಭಿನಯ (ರೋಲ್ ಪ್ಲೇ) | * ಅಭ್ಯಾಸ ಹಾಳೆಗಳಲ್ಲಿ ಬರೆಯುವುದು ಮತ್ತು ಪುನಃ ಅದನ್ನು ಶಿಕ್ಷಕರು ತಿದ್ದುವುದು (ಸರಿಪಡಿಸುವುದು) | * ರೋಲ್ ಪ್ಲೇ/ಪಾತ್ರಾಭಿನಯನವನ್ನು ಮಕ್ಕಳಿಗೆ ಚಿಕ್ಕ–ಚಿಕ್ಕ ಸಮೂಹದಲ್ಲಿ ತಯಾರಿ ನಡೆಸುವುದು.<br>* ಪಾತ್ರಾಬಿನಯದ ನಿರೂಪಣೆ ದೊಡ್ಡ ಸಮೂಹದಲ್ಲಿ ಆಗಲಿ |
| | **ಮಾನಸಿಕ ಆಲೇಖ** | **ಸ್ವಯಂಲೇಖನ** |
| ಬರವಣಿಗೆ | * ಮೈಂಡ್ ಮ್ಯಾಪಿಂಗ್/ ಮಾನಸಿಕ ಆಲೇಖ ಕಥೆಯ ಬಗ್ಗೆ | * ಸ್ವಯಂ ಲೇಖನ |

ಸಮೂಹ ಕಾರ್ಯಗಳಲ್ಲಿ ಈ ಮಟ್ಟದ ಮಕ್ಕಳ ಪಾಲ್ಗೊಳ್ಳುವಿಕೆ ಸಾಧ್ಯವಾದಷ್ಟು ಹೆಚ್ಚಾಗಿರುವಂತೆ ಮಾಡಲು ಪ್ರಯತ್ನಿಸಿ ಮತ್ತು ಶಿಕ್ಷಕರು ಕೇವಲ ಸಹಾಯಕರ ರೂಪದಲ್ಲಿ ಅವರಿಗೆ ಸಹಾಯ ಮಾಡಲಿ.

## (ii) ಕಥಾ ಓದಿಗೆ ಪೂರಕ ಚಟುವಟಿಕೆಗಳು

ಮುಂದುವರಿದ ಹಂತ – ಕಥಾ ವಿಧಾನಗಳು :

1. ಮಕ್ಕಳಿಂದ ಮೌನವಾಚನ : ಮಕ್ಕಳನ್ನು ಸಣ್ಣ ಸಣ್ಣ ಗುಂಪುಗಳಾಗಿ ವಿಂಗಡಿಸಿ ಮೌನವಾಚನಮಾಡಲು ತಿಳಿಸಿ.
2. ಶೀರ್ಷಿಕೆ ಬಗ್ಗೆ ಮತ್ತೊಮ್ಮೆ ಚರ್ಚೆ ಮಾಡಿ : ಕಥೆಯನ್ನು ಆಲಿಸಿದ ನಂತರ ಕಥೆಯ ಬಗ್ಗೆ ಮಕ್ಕಳ ಅನಿಸಿಕೆ.
3. ಮಕ್ಕಳಿಂದ ಕಥಾ ರಚನೆ : ಮಕ್ಕಳಿಗೆ ಕಥೆಯ ಆರಂಭದಿಂದ ಅಂತ್ಯದವರೆಗೂ ಬರುವ ಪದಗಳನ್ನು ಹೇಳುವಂತೆ ಹೇಳಿ ಆ ಪದಗಳನ್ನು ಕಪ್ಪು ಹಲಗೆಯ ಮೇಲೆ ವಿದ್ಯಾರ್ಥಿ ಬರೆಯಲಿ ಅಥವಾ ಶಿಕ್ಷಕರೇ ಬರೆಯಲಿ. ನಂತರ ಆ ಪದಗಳನ್ನು ಕ್ರಮವಾಗಿ ಜೋಡಿಸುವಂತೆ ಹೇಳಿ.

   ಈ ಚಟುವಟಿಕೆಯ ಸಹಾಯದಿಂದ ಕಥೆಯನ್ನು ಹೇಳಲು ಪ್ರೋತ್ಸಾಹಿಸಿ. ಈ ಚಟುವಟಿಕೆಯಿಂದ ಮಕ್ಕಳಲ್ಲಿ ಕಥೆಯ ಸಾರಾಂಶವನ್ನು ಹೇಳುವ ಸಾಮರ್ಥ್ಯ ವಿಕಾಸವಾಗುತ್ತದೆ. ಮಕ್ಕಳು ಹೇಳುವ ಕಥೆಯ ಸಾರಾಂಶದ ಬಗ್ಗೆ ಅವರವರ ಪುಸ್ತಕದಲ್ಲಿ ಬರೆಯುವಂತೆ ಮಕ್ಕಳನ್ನು ಪ್ರೇರೇಪಿಸಿ.

4. ಗುಂಪು ಚಟುವಟಿಕೆಗಳು –

1. ಮೊದಲನೇ ಹಂತದ ಪ್ರಶ್ನೆಗಳು : ಒಟ್ಟು ಮಕ್ಕಳನ್ನು ಸಣ್ಣ ಸಣ್ಣ (4–5) ಗುಂಪುಗಳಾಗಿ ವಿಂಗಡಿಸಿ. ಒಂದು ಗುಂಪು ಕಥೆಗೆ ಸಂಬಂಧಿಸಿದ ಒಂದು ವಾಕ್ಯದ ಪ್ರಶ್ನೆಗಳನ್ನು, ಎರಡನೇ ಗುಂಪು ಆ ಕಥೆಯಲ್ಲಿ ಬರುವ ಸಮಾನಾರ್ಥಕ ಪದಗಳನ್ನು, ಮೂರನೇ ಗುಂಪು ವಿರುದ್ಧಾರ್ಥಕ ಪದಗಳನ್ನು ಮತ್ತು ನಾಲ್ಕನೇ ಗುಂಪು ಕಷ್ಟವಾದ ಪದಗಳನ್ನು ಪಟ್ಟಿಮಾಡಲು ಹೇಳಿ. ಅವರಲ್ಲಿ ಒಂದು ಸ್ಪರ್ಧೆಯನ್ನು ಏರ್ಪಡಿಸಿ. ಮೊದಲನೆಯ ಗುಂಪು ಎರಡನೇ ಗುಂಪಿಗೆ ಪ್ರಶ್ನಿಸಲಿ. ಸರಿ ಉತ್ತರ ಬಂದಲ್ಲಿ ಎರಡನೇ ಗುಂಪಿಗೆ ಬಂದು ಅಂಕವನ್ನು ಕಪ್ಪು ಹಲಗೆಯನ್ನು ಬರೆಯಿರಿ. ನಂತರ ಎರಡನೇ ಗುಂಪು ಮೂರನೇ ಗುಂಪಿಗೆ ಪ್ರಶ್ನಿಸಲಿ. ಹೀಗೆ ಮುಂದುವರೆದು ಕೊನೆಯಲ್ಲಿ ಒಟ್ಟು ಪ್ರಶ್ನೆಗಳಿಗೆ ಯಾವ ಗುಂಪು ಹೆಚ್ಚು ಅಂಕಗಳನ್ನು ಗಳಿಸುತ್ತಾರೋ ಆ ಗುಂಪು ವಿಜೇತರು ಎಂದು ಘೋಷಿಸಿ.

**ಎರಡನೇ ಹಂತದಲ್ಲಿ ಕೇಳಬೇಕಾದ ಪ್ರಶ್ನೆ : –**

1. ಕಥೆಯಲ್ಲಿ ಏನನ್ನು ಕೊಡಲಾಗಿದೆ?
2. ಈ ಕಥೆಯಲ್ಲಿ ನೀಡಿರುವ ವಿಷಯವನ್ನು ಏಕೆ ಕೊಡಲಾಗಿದೆ?
3. ಕಥೆಯಲ್ಲಿ ನೀಡಿರುವ ವಿಷಯವನ್ನು ನಿಮ್ಮ ಅನುಭವಕ್ಕೆ ಯಾವ ರೀತಿ ಜೋಡಿಸುವಿರಿ?
4. ಈ ಕಥೆಯಲ್ಲಿ ಕೊಟ್ಟಿರುವ ತಿಳುವಳಿಕೆ (ಮಾಹಿತಿ)ಯ ಜೊತೆಗೆ ನಿಮಗೆ ತಿಳಿದಿರುವ ಹೆಚ್ಚಿನ ತಿಳುವಳಿಕೆ ಏನು ?

* ಕಥೆಗೆ ಸಂಬಂಧಿಸಿದ ಪ್ರಶ್ನೆಗಳ ಅಭ್ಯಾಸ
* ಕಥೆಯ ಪಾತ್ರಗಳ ಬಗ್ಗೆ ಚರ್ಚಿಸಿ ಕಥೆಯಲ್ಲಿ ಯಾವ ಪಾತ್ರ ಮುಖ್ಯವಾದುದ್ದು ಎಂದು ಮಕ್ಕಳನ್ನು ಕೇಳಿ, ಇದರಲ್ಲಿ ಮಕ್ಕಳ ಅಭಿಪ್ರಾಯ ಮಹತ್ವಪೂರ್ಣವಾಗಿರುತ್ತದೆ ಬಹುಶಃ ಎಲ್ಲಾ ಮಕ್ಕಳೂ ಒಂದೇ ಮುಖ್ಯ ಪಾತ್ರವನ್ನು ಆಯ್ಕೆ ಮಾಡುವುದಿಲ್ಲ. ಅವರ ಅಭಿಪ್ರಾಯ ಏನೇ ಆಗಿರಲಿ ಅದರ ಬಗ್ಗೆ ಮಾತನಾಡಲು ಅವರನ್ನು ಪ್ರೇರೇಪಿಸಿ. ಈ ಪ್ರಕ್ರಿಯೆಯ ಆಧಾರದ ಮೇಲೆ ಕಥೆಯ ಪ್ರಧಾನಕಲ್ಪನೆ/ಯೋಚನೆ/ಪರಿಕಲ್ಪನೆಯನ್ನು ತಿಳಿಸಲು ಅವರಿಗೆ ಹೇಳಿ.

ಇದೇ ಪದ್ಧತಿಯನ್ನು ಉಪಯೋಗಿಸಿ ಪಠ್ಯಪುಸ್ತಕಗಳ ಪಾಠಗಳಿಗೆ ಸಂಬಂಧಿಸಿದಂತೆ ಕಾರ್ಯಮಾಡುವಂತೆ ಮಕ್ಕಳನ್ನು ಪ್ರೇರೇಪಿಸಿ. ಒಂದು ಸಲ ಮಕ್ಕಳಿಗೆ ಗುಂಪಿನಲ್ಲಿ ಅಧ್ಯಯನದ ಅಭ್ಯಾಸ ಬೆಳೆದರೆ ನಂತರ ಕ್ರಮೇಣ ಪಾಠವನ್ನು ತಿಳುವಳಿಕೆಯೊಂದಿಗೆ ಅಧ್ಯಯನ ಮಾಡುವುದನ್ನು ತಾವಾಗಿಯೇ ಕಲಿತುಕೊಳ್ಳುತ್ತಾರೆ.

ಗಮನಿಸಬೇಕಾದ ಅಂಶಗಳು

* ಎಲ್ಲಿ ಸಹಾಯ ಮಾಡಬೇಕು
* ಯಾವ ವಿಷಯಾಂಶವನ್ನು ಮಕ್ಕಳ ಚರ್ಚೆಗೆ ಇಡಬೇಕು
* ಯಾವಯಾವ ಮಕ್ಕಳು ಈ ಚಟುವಟಿಕೆಯಲ್ಲಿ ಭಾಗವಹಿಸುತ್ತಿಲ್ಲ ಅಥವಾ ಭಾಗವಹಿಸಲು ಇಷ್ಟಪಡುವುದಿಲ್ಲ. ನೀವು ಇಂಥಹ ಮಕ್ಕಳ ತಂದೆತಾಯಿಯನ್ನು ಖಂಡಿತವಾಗಿ ಭೇಟಿಯಾಗಬೇಕು ಅವರೊಂದಿಗೆ ಮಗುವಿನ ಇನ್ನಾವುದಾದರೂ ಸಮಸ್ಯೆ ಇದೆಯೇ ಎನ್ನುವುದನ್ನು ತಿಳಿದುಕೊಳ್ಳಬೇಕು. ಈ ಮಾಹಿತಿ ಆಧಾರದ ಮೇಲೆ ಇಂಥಹ ಮಕ್ಕಳ ಜೊತೆ ನೀವೇ ಕೆಲಸ ಮಾಡಬೇಕಾಗುತ್ತದೆ.

**ಸೂಚನೆ : ಮೊದಲ ಹಂತದ ಕಥೆಯಲ್ಲಿ ಕನ್ನಡ ಭಾಷೆಯ ಕಾಗುಣಿತ ಮತ್ತು ಒತ್ತಕ್ಷರಗಳ ಓದು ಬರಹವನ್ನು ಸ್ಪಷ್ಟವಾಗಿ ಕಲಿಯಲು ವಿಶೇಷ ರೀತಿಯಲ್ಲಿ ಕಥೆಗಳನ್ನು ರಚಿಸಲಾಗಿದೆ. ಮುಂದುವರೆದ ಹಂತದಲ್ಲಿ ಕಥೆಗಳನ್ನು ಮಕ್ಕಳ ಸ್ವಯಂ ವಾಚನಕ್ಕಾಗಿ ಹಾಗೂ ಅರ್ಥೈಸುವಿಕೆಗೆ ಒತ್ತು ನೀಡಿದೆ.**

## (iii) ಪಾತ್ರಾಭಿನಯ (Role play) :

ಉದ್ದೇಶ :

- ಯಾವುದಾದರೂ ವಿಷಯದ / ಕಥೆಯ ಬಗ್ಗೆ ಪಾತ್ರಾಭಿನಯವನ್ನು ಮಾಡುವುದರಿಂದ ಮಕ್ಕಳು ಆ ವಿಷಯದ / ಕಥೆಯ ಬಗ್ಗೆ ಸಂವೇಗಾತ್ಮಕವಾಗಿ ತಮ್ಮನ್ನು ಸಂಬಂಧಿಸಿಕೊಳ್ಳುತ್ತಾರೆ. ಮತ್ತು ಆ ವಿಷಯದ / ಕಥೆಯ ಬಗ್ಗೆ ತಮ್ಮ ವಿಚಾರಗಳನ್ನು ಉತ್ತಮ ರೀತಿಯಲ್ಲಿ ಪ್ರಸ್ತುತ ಪಡಿಸಲು ಶಕ್ತರಾಗುತ್ತಾರೆ. ಪಾತ್ರಾಭಿನಯವನ್ನು (ರೋಲ್ ಪ್ಲೇಯನ್ನು) ಮಾಡುವುದರಿಂದ ಮಕ್ಕಳ ರಚನಾತ್ಮಕತೆ, ಸೃಜನಾತ್ಮಕತೆ ಮತ್ತು ತರ್ಕ ಮಾಡುವ ದಕ್ಷತೆ ವಿಕಾಸಗೊಳ್ಳುತ್ತದೆ ಮತ್ತು ಮಕ್ಕಳ ಆತ್ಮವಿಶ್ವಾಸ ಹೆಚ್ಚುತ್ತದೆ.

- ಪಾತ್ರಾಭಿನಯದಲ್ಲಿ ಪಾಲ್ಗೊಂಡ ಎಲ್ಲಾ ಮಕ್ಕಳು ತಮ್ಮ ಅನುಭವಗಳ ಮೂಲಕ ಪಾತ್ರಾಭಿನಯದಲ್ಲಿ ವಿಷಯದ / ಅದರ ಯಾವುದೇ ಮುಖದಿಂದ ಹೊರಗೆ ಘಟಿಸುವ ಅಥವಾ ಘಟಿಸಿರುವ ಘಟನೆಗಳನ್ನು ಸೇರಿಸಿಕೊಂಡು ವಿಷಯದ ಬಗ್ಗೆ ವಿಚಾರ ವಿಮರ್ಶೆ ಮಾಡುತ್ತಾರೆ.
- ಮಕ್ಕಳ ವರ್ತನೆ (ವ್ಯವಹಾರ)ಯಲ್ಲಿ ಧನಾತ್ಮಕ ಬದಲಾವಣೆ ಉಂಟಾಗತೊಡಗುತ್ತದೆ.

**ವಿಧಾನ :**

- ತರಗತಿಯಲ್ಲಿರುವ ಎಲ್ಲಾ ಮಕ್ಕಳನ್ನು ಸಣ್ಣ ಸಣ್ಣ ಗುಂಪುಗಳಾಗಿ ಕೂರಿಸಿ ಕಥೆಯ ಪಾತ್ರಾಭಿನಯದ ಯೋಜನೆ ತಯಾರಿಸುವಂತೆ ಹೇಳಿ.
- ಪ್ರತಿಯೊಂದು ಸಮೂಹ, ಓದಿರುವ ಕಥೆಯ ಆಧಾರದ ಮೇಲೆ ಯಾರು ಏನಾಗುವವರು, ಏನ ಹೇಳುವರು ಮತ್ತು ಏನೇನು ಮಾಡಬೇಕು ಮುಂತಾದವುಗಳ ಬಗ್ಗೆ ಯೋಜನೆ ತಯಾರಿಸಬೇಕು. (ಮಕ್ಕಳು ಪಾತ್ರಾಭಿನಯ ಯೋಜನೆ ಮೊದಲು ಮೌಕಿಕವಾಗಿ ಮತ್ತು ಕೆಲವು ದಿನಗಳ ನಂತರ ಬರವಣಿಗೆಯ ರೂಪದಲ್ಲಿಯೂ ಮಾಡಬಹುದು.)
- ಒಂದು ಗುಂಪಿನಲ್ಲಿ 6 ರಿಂದ 8 ಮಕ್ಕಳನ್ನು ಸೇರಿಸಿ ಅಗತ್ಯಕ್ಕೆ ಅನುಸಾರವಾಗಿ ಬೇಸಿಕ್ ಮಟ್ಟದಲ್ಲಿರುವ ಮಕ್ಕಳನ್ನು ಪಾತ್ರಾಭಿನಯದಲ್ಲಿ ಸೇರಿಸಿಕೊಳ್ಳಬಹುದು.
- ಪ್ರಾತ್ರಾಭಿನಯದ ಸಮಯದಲ್ಲಿ ಎಲ್ಲಾ ಮಕ್ಕಳು ಪಾಲ್ಗೊಳ್ಳುವುದನ್ನು ಖಚಿತ ಪಡಿಸಿಕೊಳ್ಳಿ.
- ತಮ್ಮ ತಮ್ಮ ಗುಂಪಿನಲ್ಲಿ ಮಕ್ಕಳು ತಮ್ಮ ತಮ್ಮ ಪಾತ್ರದ ಆಯ್ಕೆಯ ಬಗ್ಗೆ ಮತ್ತು ಮಾತನಾಡಬೇಕಾದ ಸಂಭಾಷಣೆಯ ಬಗ್ಗೆ ಚರ್ಚೆ ಮಾಡಲಿ ಮತ್ತು ಅಭ್ಯಾಸ ಮಾಡಲಿ.
- ಪಾತ್ರಾಭಿನಯಕ್ಕೆ ಕೊಟ್ಟಿರುವ ವಿಷಯದ ಜೊತೆಗೆ ಮಕ್ಕಳು ತಮ್ಮದೇ ಆದ ಮಾತುಗಳನ್ನು ಸಂಭಾಷಣೆಗೆ ಸೇರಿಸಿಕೊಳ್ಳಬಹುದು. ಆದರೆ ಹಾಗೆ ಮಾಡುವಾಗ ವಿಷಯದ / ಕಥೆಯ ಉದ್ದೇಶದಲ್ಲಿ ಯಾವುದೇ ಬದಲಾವಣೆಯಾಗದಂತೆ ಎಚ್ಚರವಸಹಿಸಬೇಕು.
- ಪಾತ್ರಾಭಿನಯವನ್ನು ಮನೋರಂಜಕವಾಗಿ ಮಾಡಲು ಪಾತ್ರಗಳಿಗೆ ಅನುಗುಣವಾದ ವೇಷ – ಭೂಷಣಗಳನ್ನು ಮತ್ತು ಇತರ ಅಗತ್ಯವಾದ ವಸ್ತುಗಳನ್ನು ಉಪಯೋಗಿಸಿಕೊಳ್ಳುವುದು.
- ಪಾತ್ರಾಭಿನಯದ ಅವಧಿಯಲ್ಲಿ ಎಲ್ಲಾ ಮಕ್ಕಳು ತಮ್ಮ ಸೂಚನೆ, ಸಲಹೆಗಳನ್ನು ತಮ್ಮ ನೋಟ್ ಬುಕ್ಕಿನಲ್ಲಿ ಬರೆದುಕೊಳ್ಳಿ ಮತ್ತು ಕೊನೆಯ ಪಾತ್ರಾಭಿನಯ ತೋರಿಸುವ ಗುಂಪಿನ ಮಕ್ಕಳಿಗೆ ಆ ಸಲಹೆಗಳನ್ನು ತೋರಿಸಲಿ.
- ಶಿಕ್ಷಕರು / ಸಹಾಯಕರು ಕೂಡ ಮಕ್ಕಳಿಗೆ ಸೂಚನೆಗಳನ್ನು ಕೊಡಬಹುದು. ಇದರಿಂದ ಮತ್ತೊಮ್ಮೆ ಪಾತ್ರಾಭಿನಯ ಮಾಡುವಾಗ ಅದರಲ್ಲಿ ಸುಧಾರಣೆಗಳನ್ನು ಮಾಡಿಕೊಳ್ಳಲು ಸಾಧ್ಯವಾಗಿರುತ್ತದೆ.
- ಒಂದು ಸಮೂಹ ಪ್ರದರ್ಶನ ಮಾಡಿದ ನಂತರ ಶಿಕ್ಷಕ ಮತ್ತು ಉಳಿದ ಸಮೂಹಗಳು ಅವರ ಪ್ರದರ್ಶನದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹೇಳುವುದು. ಇದರ ಬಗ್ಗೆ ಎಲ್ಲಾ ಮಕ್ಕಳೂ ಯೋಚಿಸುತ್ತಾ ಬರೆಯಲಿ ಮತ್ತು ಚರ್ಚೆ ಮಾಡಲಿ.

## (iv) ಮಾನಸಿಕ ಆಲೇಖ – ಮೈಂಡ್ ಮ್ಯಾಪಿಂಗ್ *(Mind mapping)*

ಯಾವುದೇ ವಿಷಯದ ಬಗ್ಗೆ ವಿಚಾರ ಮಾಡುವಾಗ ನಮ್ಮ ಮನಸ್ಸಿನಲ್ಲಿ ಆ ವಿಷಯಕ್ಕೆ ಸಂಬಂಧಿಸಿದಂತೆ ಅನೇಕ ಪದಗಳು / ವಾಕ್ಯಗಳು / ವಿಷಯಗಳು ಮೂಡುತ್ತವೆ. ಹೀಗೆ ಮನಸ್ಸಿನಲ್ಲಿ ಒಂದು ವಿಷಯದ ಬಗ್ಗೆ ಮೂಡುವ ಪದಗಳು / ವಾಕ್ಯಗಳನ್ನು ಬರೆದುಕೊಳ್ಳುವ ಅಭ್ಯಾಸಕ್ಕೆ 'ಮಾನಸಿಕ ಆಲೇಖ' ಅಥವಾ Mind mapping ಎನ್ನುತ್ತಾರೆ. ಇಂತಹ ಪದಗಳು ನಮ್ಮ ಅನುಭವದಿಂದ ಹೊರಹೊಮ್ಮುತ್ತವೆ; ಇವುಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಉಪಯೋಗಿಸಬಹುದು.

ತರಗತಿಯ ಎಲ್ಲಾ ಮಕ್ಕಳನ್ನೂ ಕೂರಿಸಿ 'ಮೈಂಡ್ ಮ್ಯಾಪ್' ಚಟುವಟಿಕೆಯಲ್ಲಿ ತೊಡಗಿಸಿ ಮೊದಲು ಒಂದು ಪದ ಸೂಚಿಸಿ. ಸರತಿ ಪ್ರಕಾರ ಮಗುವು ಸೂಚಿಸಿದ ಪದಕ್ಕೆ ಸಂಬಂಧಿಸಿದಂತೆ ತನಗೆ ತೋಚಿದ ಪದ/ ವಾಕ್ಯಗಳನ್ನು ಹೇಳುವಂತೆ ಪ್ರೇರೇಪಿಸಿ. ಅವುಗಳನ್ನು ಪಟ್ಟಿಮಾಡಿ ಮೈಂಡ್ ಮ್ಯಾಪ್ ಅಭ್ಯಾಸದಿಂದ ಮಕ್ಕಳಿಗೆ ಅನೇಕ ಉಪಯೋಗವಿದೆ.

* ಹೊಸ ಹೊಸ ಪದಗಳೊಂದಿಗೆ ಸಂಬಂಧಪಟ್ಟ ವಿಷಯಗಳನ್ನು ಅರಿಯುವಿಕೆ.
* ವ್ಯಕ್ತಿಗತ ಪದಕೋಶವನ್ನು ತರಗತಿಯ ಸಾಮೂಹಿಕ ಪದಕೋಶವನ್ನಾಗಿ ಬಳಕೆ
* ಇತರರ ದೃಷ್ಟಿಕೋನವನ್ನು ಅರಿಯುವ ಸಾಧ್ಯತೆ
* ಪದ ಭಂಡಾರ, ಪದಗಳ ವರ್ಗೀಕರಣ, ವಿವಿಧ ರೀತಿಯ ವಾಕ್ಯರಚನೆ ಇತ್ಯಾದಿ ಕ್ಷಮತೆಗಳ ವಿಕಾಸ
* ಮೈಂಡ್ ಮ್ಯಾಪಿಂಗ್‌ನಿಂದ ದೊರೆತ ಪದಗಳ / ವಾಕ್ಯಗಳಿಂದ ಹೊಸ ಕಥಾರಚನೆ. ಮಕ್ಕಳ ಮಟ್ಟಕ್ಕೆ ಅನುಗುಣವಾಗಿ ಮೈಂಡ್ ಮ್ಯಾಪ್‌ನ ಗುರಿ ನಿರ್ಧರಿಸಿ.

ಶಿಕ್ಷಕರು ಮೈಂಡ್ ಮ್ಯಾಪಿಂಗ್ ಚಟುವಟಿಕೆಯ ಗುರಿ ತಲುಪುವವರೆಗೂ ಮಕ್ಕಳಿಗೆ ಪ್ರೋತ್ಸಾಹಿಸಬೇಕಾದುದು ಅತ್ಯಾವಶ್ಯಕ.

ಉದಾ :




ವಾಕ್ಯರಚನೆ :
– **ಸರ** ಪೋಣಿಸಿದಳು
– ಕಷ್ಟದ **ಸಮಯ**ದಲ್ಲಿ **ಸಹಾಯ** ಮಾಡಿದಳು
– **ಸರಸ, ಸರಳ ಸಂತೋಷ**ವಾಗಿದ್ದರು ಇತ್ಯಾದಿ

**ಮೈಂಡ್ ಮ್ಯಾಪಿಂಗ್‌ನಲ್ಲಿ ಬಂದಿರುವ ಶಬ್ದಗಳೊಂದಿಗೆ ಈ ಕೆಳಕಂಡ ಚಟುವಟಿಕೆಗಳನ್ನು ಮಾಡಲಾಗಿದೆ.**

• **ಶಬ್ದಗಳ ವಿಂಗಡಣೆ:** ಮೈಂಡ್ ಮ್ಯಾಪಿಂಗ್‌ನಲ್ಲಿ ಯಾವ ಶಬ್ದಗಳು ಬಂದಿವೆ. ಅವುಗಳ ವಿಂಗಡಣೆ ಮಾಡಲು ಮಕ್ಕಳನ್ನು ಸಣ್ಣ ಸಮೂಹಗಳಲ್ಲಿ ಶಿಕ್ಷಕರು, ಮಕ್ಕಳಿಗೆ ಶಬ್ದಗಳನ್ನು ಯಾವುದರಲ್ಲಿ ವಿಂಗಡಿಸಲಾಗುವುದು ಎಂಬುದನ್ನು ಹೇಳುವುದು. ಉದಾ: ನಾಮಪದ, ವಿಶೇಷಣ ಮತ್ತು ಕ್ರಿಯಾಪದ ಮುಂತಾದವುಗಳ ಆಧಾರದಲ್ಲಿ.

• **ವಿರುಧ್ಧಾರ್ಥಕ ಶಬ್ದ:** ಶಿಕ್ಷಕರು ವಿರುದ್ಧಾರ್ಥಕ ಶಬ್ದಗಳ ಚೀಟಿ ಮಾಡಿಕೊಂಡು ಮಕ್ಕಳಿಗೆ ಹಂಚಲಿ. ಅನಂತರ ಕಪ್ಪುಹಲಗೆಯ ಮೇಲೆ ಬರೆಯಿರಿ. ಉದಾ: **ಸರಳ** ಮತ್ತು ಎಲ್ಲ ಮಕ್ಕಳು ತಮ್ಮ ಚೀಟಿ ತೆಗೆದು ನೋಡಲಿ ಮತ್ತು ಓದಲಿ. ಯಾರ ಬಳಿ ಅದರ ವಿರುದ್ಧಾರ್ಥಕ ಶಬ್ದ **ಕಠಿಣ** ಶಬ್ದದ ಚೀಟಿ ಇರುವುದೋ ಅವರು ಕಪ್ಪುಹಲಗೆಯ ಮೇಲೆ ಆ ಮಗು ಅದನ್ನು ಬರೆದು ಓದಲಿ.

• **ಪದಗಳಿಂದ ವಾಕ್ಯ:** ಶಿಕ್ಷಕರು ಮೈಂಡ್ ಮ್ಯಾಪಿಂಗ್‌ನ ಪದಗಳ ಸಹಾಯದಿಂದ, ಒಂದು/ಎರಡು ಪದಗಳನ್ನು ಆಯ್ಕೆ ಮಾಡಿಕೊಂಡು ಅವುಗಳಿಂದ ವಾಕ್ಯಗಳನ್ನು ರಚಿಸಿ ಕಪ್ಪು ಹಲಗೆಯ ಮೇಲೆ ಬರೆದು ತೋರಿಸಲಿ. ತದ ನಂತರ ಮಕ್ಕಳಿಗೆ ಚಿಕ್ಕ ಸಮೂಹದಲ್ಲಿ ಕುಳಿತು ಮೈಂಡ್ ಮ್ಯಾಪಿಂಗ್‌ನಲ್ಲಿರುವ ಪದಗಳ ಸಹಾಯದಿಂದ ವಾಕ್ಯ ಮಾಡಲು ಹೇಳಲಿ. ಪ್ರತಿಯೊಂದು ಸಮೂಹ ವಾಕ್ಯ ಮಾಡಿದ ಮೇಲೆ ಅದನ್ನು ಓದಿ ಕೇಳಿಸಲಿ. ಅತಿ ಹೆಚ್ಚು ವಾಕ್ಯಗಳನ್ನು ಮಾಡಿದ ಸಮೂಹ ಗೆಲ್ಲುವುದು.

**•ಪದಗಳಿಂದ ಕಥೆ:** ಮಕ್ಕಳಿಗೆ ಚಿಕ್ಕ ಚಿಕ್ಕ ಸಮೂಹಗಳಲ್ಲಿ, ಮೈಂಡ್ ಮ್ಯಾಪಿಂಗ್‌ನಲ್ಲಿ ಹೇಳಿರುವ/ಬರೆದಿರುವ ಶಬ್ದಗಳಿಂದ 5-6 ಶಬ್ದಗಳನ್ನು ಆಯ್ಕೆ ಮಾಡಿಕೊಂಡು ಕಥೆ ಬರೆಯುವಂತೆ ಹೇಳಿ. ಉದಾ: ಶಿಕ್ಷಕರು ತಾವೇ 2/3 ಶಬ್ದಗಳ ಸಹಾಯದಿಂದ ಚಿಕ್ಕ ಕಥೆಯನ್ನು ರಚಿಸಿ ತೋರಿಸಿ. (ಪ್ರತಿಯೊಂದು ಸಮೂಹ 5/6 ಶಬ್ದಗಳನ್ನು ಆಯ್ಕೆ ಮಾಡಿಕೊಳ್ಳಬಹುದು).

**ಗಮನಿಸಬೇಕಾದ ಅಂಶಗಳು**

• ಮೈಂಡ್ ಮ್ಯಾಪಿಂಗ್ ನ ವಿಷಯವನ್ನು ತಿಳಿದ ಮೇಲೆ ಮಕ್ಕಳನ್ನು ಆ ಶಬ್ದಗಳನ್ನು ವೈಯಕ್ತಿಕವಾಗಿ ವಿಂಗಡಣೆ ಮಾಡುವಂತೆ ಹೇಳಿ.

• ಆರಂಭದಲ್ಲಿ ಮೈಂಡ್ ಮ್ಯಾಪಿಂಗ್ ದೊಡ್ಡ ಸಮೂಹದಲ್ಲಿ ಮಾಡಿ. ಕೆಲವು ದಿನಗಳ ನೋತರ ಚಿಕ್ಕ ಸಮೂಹದಲ್ಲಿ ಅಥವಾ ವೈಯುಕ್ತಿಕವಾಗಿ ಕೂಡ ಮೈಂಡ್ ಮ್ಯಾಪಿಂಗ್ ಮಾಡಬಹುದು.

## (v) ಅಭ್ಯಾಸ ಹಾಳೆ *(Work sheet)*

ಅಭ್ಯಾಸ ಹಾಳೆಯಲ್ಲಿ ಬರೆಯುವುದರಿಂದ ಬರವಣಿಗೆಯ ಅಭ್ಯಾಸದ ಜೊತೆಗೆ ಕಥೆಯನ್ನು ಚೆನ್ನಾಗಿ ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

- ಶಿಕ್ಷಕರು ಮಕ್ಕಳನ್ನು ಸಣ್ಣ ಗುಂಪುಗಳಲ್ಲಿ ಕೂರಿಸಿ ಅಭ್ಯಾಸ ಹಾಳೆಯಲ್ಲಿ ಕೊಟ್ಟಿರುವ ಕೆಲವು ಪ್ರಶ್ನೆಗಳ ಬಗ್ಗೆ ಮಾತನಾಡಲು ಅವರಿಗೆ ಹೇಳಬೇಕು.
- ಮಾತನಾಡಿದ ನಂತರ ಮಕ್ಕಳಿಗೆ ವ್ಯಕ್ತಿಗತವಾಗಿ ಅಭ್ಯಾಸ ಹಾಳೆಯ ಪ್ರಶ್ನೆಗಳಿಗೆ ಉತ್ತರ ಬರೆಯಲು ಹೇಳಬೇಕು.
- ಮಕ್ಕಳು ಬರೆಯುತ್ತಿರುವಾಗ ಶಿಕ್ಷಕರು ಪದೇ ಪದೇ ಮಕ್ಕಳ ಹತ್ತಿರ ಹೋಗಿ, ಅದರಲ್ಲಿರುವ ಪ್ರಶ್ನೆಗಳನ್ನು ಓದಿ ಮಕ್ಕಳಿಗೆ ಏನು ಮಾಡಬೇಕು ಅಥವಾ ಏನು ಬರೆಯಬೇಕು ಎಂಬುದರ ಬಗ್ಗೆ ಏನನ್ನಿಸುತ್ತಿದೆ ಎಂದು ಕೇಳಬೇಕು.
- ಮಕ್ಕಳಿಗೆ ಅಭ್ಯಾಸ ಹಾಳೆಯ ಪ್ರಶ್ನೆಗಳನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತಿದ್ದರೆ ಶಿಕ್ಷಕರು ಅವರೊಂದಿಗೆ ಮಾತನಾಡಿ, ಪ್ರಶ್ನೆಗಳಿಗೆ ಮಕ್ಕಳೇ ಉತ್ತರಿಸುವಂತೆ ಪ್ರೇರೇಪಿಸಿ.
- ಅಭ್ಯಾಸ ಹಾಳೆಯ ಎಲ್ಲಾ ಪ್ರಶ್ನೆಗಳಿಗೂ ಉತ್ತರ ಬರೆದ ನಂತರ ಒಂದ ಸಲ ಆ ಉತ್ತರವನ್ನು ಅವರೇ ಓದಿಕೊಂಡು, ಪ್ರಶ್ನೆಯಲ್ಲಿ ಏನು ಕೇಳಲಾಗಿದೆ? ಅದರ ಉತ್ತರವನ್ನು ನಾನು ಸರಿಯಾಗಿ ಬರೆದಿದೇನೆಯೇ? ಇಲ್ಲವೇ? ಎಂದು ಯೋಚಿಸಬೇಕೆಂದು ಶಿಕ್ಷಕರು ಮಕ್ಕಳಿಗೆ ಖಂಡಿತವಾಗಿ ಹೇಳಬೇಕು. ಉತ್ತರಗಳಲ್ಲಿ ಒಂದು ವೇಳೆ ತಪ್ಪುಗಳಿದ್ದಲ್ಲಿ ಅವುಗಳನ್ನು ಸರಿಪಡಿಸಲು ಮಕ್ಕಳಿಗೆ ಹೇಳಬೇಕು.
- ಮಕ್ಕಳ ಅಭ್ಯಾಸ ಹಾಳೆಗಳನ್ನು ಪರೀಕ್ಷಿಸುವುದು ಅಗತ್ಯವಾಗುತ್ತದೆ ಮತ್ತು ಎರಡನೆ ದಿನ ಅಭ್ಯಾಸ ಹಾಳೆಯ ಪ್ರಶ್ನೆಗಳ ಬಗ್ಗೆ ಚರ್ಚೆ ಮಾಡಿ.
- ಪೂರ್ಣವಾಗದ ಅಭ್ಯಾಸ ಹಾಳೆಗಳನ್ನು ಮಕ್ಕಳು ಮನೆಗೆ ತೆಗೆದುಕೊಂಡು ಹೋಗಿ ಪೂರ್ಣಗೊಳಿಸಲಿ.

ಗಮನಿಸಬೇಕಾದ ಅಂಶಗಳು

* ಒಂದು ವೇಳೆ ಅಭ್ಯಾಸ ಪುಸ್ತಕದಲ್ಲಿ ನೀಡಿರುವ ಕೆಲಸ/ ಪ್ರಶ್ನೆಗಳನ್ನು ತಿಳಿದುಕೊಳ್ಳಲು ಮಕ್ಕಳಿಗೆ ತುಂಬಾ ಕಷ್ಟವಾಗುತ್ತಿದ್ದರೆ ದೊಡ್ಡ ಸಮೂಹದಲ್ಲಿ ಆ ಪ್ರಶ್ನೆಯ ಉತ್ತರದ ಬಗ್ಗೆ ಮಾತನಾಡಿ.
* ಪ್ರತಿದಿನ ಅಭ್ಯಾಸ ಪುಸ್ತಕದ ಪರಿಶೀಲನೆ ಅಗತ್ಯ, ಏಕೆಂದರೆ ಮುಂದಿನ ದಿನದ ತರಗತಿಯ ನಿರ್ವಹಣೆಗೆ ಸಹಾಯವಾಗುತ್ತದೆ.
* ಪ್ರತಿಯೊಂದು ಮಗು ಮಾಡಿದ ಅಭಾಸ ಪುಸ್ತಕದ ಕಾಪಿಯನ್ನು ತಮ್ಮ ತಮ್ಮಲ್ಲೇ ಬದಲಾಯಿಸಿಕೊಂಡು ಪರಿಶೀಲಿಸುವುದು.

## (vi) ಸ್ವಯಂ ಲೇಖನ (Self Writing)

**ಕಾಪಿ ಬರೆಯುವುದು ಮತ್ತು ಉಕ್ತಲೇಖನ :** ಮಕ್ಕಳಿಗೆ ಒಂದು ಅಥವಾ ಎರಡು ವಾಕ್ಯಗಳ ಉಕ್ತಲೇಖನವನ್ನು ದಿನ ಬಿಟ್ಟು ದಿನ ಒಂದಾದ ನಂತರ ಒಂದನ್ನು ಬದಲಿಸಿ ಚಟುವಟಿಕೆಯನ್ನು ಮಾಡಿಸಿ.

ಪ್ರತಿ ದಿನವು ಆರಂಭದಲ್ಲಿ ಈ ಚಟುವಟಿಕೆಯನ್ನು ಮಕ್ಕಳಿಂದ ಮಾಡಿಸಿ. ಬರವಣಿಗೆಯ ನಂತರ ಮಕ್ಕಳಿಗೆ ಒಬ್ಬರು ಮತ್ತೊಬ್ಬರ ಬರವಣಿಗೆಯನ್ನು ಪರೀಕ್ಷಿಸಲು ಹೇಳಿ.

ಬರವಣಿಗೆಯಲ್ಲಿ ಯಾವ ಯಾವ ತಪ್ಪುಗಳಿಗೆ ಮತ್ತು ಎಷ್ಟು ತಪ್ಪುಗಳಿಗೆ ಎಂಬುದರ ಬಗ್ಗೆ ಮಾತನಾಡಿ. ಉಕ್ತಲೇಖನವನ್ನು ಕೊಡುವಾಗ, ವಾಕ್ಯಗಳನ್ನು ಹೇಳುವಾಗ ಉಚ್ಚಾರಣೆ ಸರಿಯಾಗಿ ಇರಬೇಕು ಎಂಬುದು ಗಮನದಲ್ಲಿರಿಸಿ. ಉಚ್ಚಾರಣೆ ಸರಿಯಾಗಿಲ್ಲದಿದ್ದಲ್ಲಿ ಬರವಣಿಗೆಯಲ್ಲಿ ತಪ್ಪುಗಳಾಗುವ ಸಾಧ್ಯತೆಗಳಿರುತ್ತದೆ.

**ಲೇಖನ : ಲೇಖನವನ್ನು ಹೇಗೆ ಆರಂಭಿಸಬೇಕು ಎಂಬುವುದಕ್ಕೆ ಸಹಾಯಕವಾಗುವ ಸೂಚನೆಗಳನ್ನು ಈ ಕೆಳಗೆ ಕೊಡಲಾಗಿದೆ.**

- **ಚಿತ್ರವನ್ನು ನೋಡಿ ಬರೆಯುವುದು :–** ಚಿತ್ರದಲ್ಲಿ ಯಾರು ಯಾರು ಇದ್ದಾರೆ? ಈ ಚಿತ್ರದಲ್ಲಿ ಯಾವುದಾದರೂ ಕಥೆ ಅಡಗಿದೆಯೋ? ಎಂದು ಚಿತ್ರವನ್ನು ನೋಡಿ ಕೆಲವು ವಾಕ್ಯಗಳನ್ನು ಅಥವಾ ಕಥೆಯನ್ನು ಬರೆಯಲು ಸಹಾಯಮಾಡಿ.
- **ಯಾವುದಾದರೂ ವಿಷಯದ ಬಗ್ಗೆ ಬರೆಯುವುದು :–** ಯಾವುದಾದರೂ ವಿಷಯವನ್ನು ನೀಡಿ ಅದರ ಬಗ್ಗೆ ಮಕ್ಕಳು ನೋಡಿ ಬರೆಯುವಂತೆ ಅಥವಾ ವಿಷಯದ ಬಗ್ಗೆ ಮಾತನಾಡುವಂತೆ ಹೇಳಿ.
- **ಪಾತ್ರಾಭಿನಯದ ಬಗ್ಗೆ ಬರೆಯುವುದು :–** ಪಾತ್ರಾಭಿನಯದ (ರೋಲ್ ಪ್ಲೇ) ಬಗ್ಗೆ ಮಾಡಿದ ಚರ್ಚೆಯ ಆಧಾರದ ಮೇಲೆ ಬರೆಯುವುದು. ಪ್ರಸ್ತುತಪಡಿಸಿದ ನಾಟಕ (ಪಾತ್ರಾಭಿನಯದ) ಬಗ್ಗೆ ಅಭಿಪ್ರಾಯ ಬರೆಯುವುದು ಇತ್ಯಾದಿ.
- **ಅಪೂರ್ಣ ವಾಕ್ಯವನ್ನು ಮುಂದುವರೆಸುವುದು :–** ಕಥಾ ಪುಸ್ತಕದಿಂದ ಕೆಲವು ವಾಕ್ಯಗಳನ್ನು ಆಯ್ಕೆ ಮಾಡಿಕೊಂಡು ಅವುಗಳನ್ನು ಕಪ್ಪು ಹಲಗೆಯ ಮೇಲೆ ಬರೆಯಿರಿ. ಅವುಗಳಲ್ಲಿ ಕೆಲವು ಪದಗಳು ಇಲ್ಲದಂತಿರಲಿ. ಮಕ್ಕಳಿಗೆ ಆ ಅಪೂರ್ಣ ವಾಕ್ಯಗಳನ್ನು ಪೂರ್ಣ ಮಾಡುವಂತೆ ಹೇಳಿ.

  ಉದಾ :– ರಾಜು ______ ಹೋದನು.

  ಅಲ್ಲಿ ಅವನು ಒಂದು ______ ನೋಡಿದನು.

  ಅದು ಬಹಳ _____ ಆಗಿತ್ತು.

ಹೀಗೆ ಸರಳ ವಾಕ್ಯಗಳಿಂದ ಪ್ಯಾರಾ ಮತ್ತು ಕಥೆಗಳನ್ನು ನೀಡಿ ಮಕ್ಕಳಿಂದ ಭರ್ತಿಮಾಡಿಸಿ. ಕಥೆ ರಚಿಸಲು ಪ್ರೇರೇಪಿಸಿ.

* **ನಿಯಮ/ ವಿಧಾನಗಳನ್ನು ಬರೆಯುವುದು:–** ಮಕ್ಕಳಿಗೆ ಆಟ ಆಡುವ ವಿಧಾನದ ಬಗ್ಗೆ ಮಾತನಾಡುವಂತೆ ಹೇಳಿ. ಇದನ್ನು ಆಡಲು ಬೇಕಾಗುವ ವಸ್ತುಗಳೇನು? ಎಷ್ಟು ಆಟಗಾರರ ತಂಡ ಬೇಕು? ಎಷ್ಟು ತಂಡಗಳೊಂದಿಗೆ ಆಟ ಆಡಲಾಗುವುದು? ಯಾವ ಸಂದರ್ಭದಲ್ಲಿ ಔಟ್ ಮಾಡಲಾಗುವುದು? ಮುಂತಾದವು.

ಮಕ್ಕಳಾಡುವ ಮಾತುಗಳನ್ನು ಗಮನದಲ್ಲಿರಿಸಿಕೊಂಡು ಆಟವಾಡುವ ವಿಧಾನದ ಬಗ್ಗೆ ಬರೆಯುವಂತೆ ಹೇಳಿ ಆದರೆ ವೈಯುಕ್ತಿಕವಾಗಿ ಬರೆಯುವಾಗ ಮಕ್ಕಳು ಸಾಮೂಹಿಕವಾಗಿ ಚರ್ಚಿಸಬಹುದು. ನಿಯಮ/ವಿಧಾನವನ್ನು ಕೆಳಗೆ ನೀಡಿರುವ ವಿಷಯಗಳ ಬಗ್ಗೆ ಬರೆಯುವುದು.

**ಆಟಗಳು:–** ಖೋ ಖೋ, ಕಬಡ್ಡಿ, ಚಿಣ್ಣಿದಾಂಡು, ಲಗೋರಿ, ಕ್ರಿಕೆಟ್, ಹಾವು–ಏಣಿ ಆಟ, ಮುಂತಾದ ಆಟಗಳು

**ಊಟದ ವಸ್ತುಗಳು:–** ಪಾಯಸ, ಚಹಾ, ಚಪಾತಿ, ಉಪ್ಪಿನಕಾಯಿ, ನಿಂಬೆಹಣ್ಣಿನ ಪಾನಕ ಮತ್ತು ಜಾಮೂನು ಮುಂತಾದವು.

**ದೈನಂದಿನ ಕಾರ್ಯಗಳು:–** ಬಟ್ಟೆ ಒಗೆಯುವುದು, ಸ್ನಾನ ಮಾಡುವುದು, ಹಲ್ಲು ಉಜ್ಜುವುದು, ಮನೆಯ ಸ್ವಚ್ಚತೆ ಮುಂತಾದವು.

* **ವಿವರಣೆ ಬರೆಯುವುದು:–**ತರಗತಿಯಲ್ಲಿ ವಿಷಯ/ವಸ್ತುವಿನ ಬಗ್ಗೆ ಮಾತನಾಡಿ ಉದಾ: **ಮೇಜು** ಇದರ ಬಗ್ಗೆ ಮಾತನಾಡಿ ಇದು ಹೇಗೆ ಕಾಣಿಸುತ್ತದೆ? ಇದು ಯಾವ ವಸ್ತುವಿನಿಂದ ಆಗುತ್ತದೆ? ಇದು ಯಾವ ಕೆಲಸಕ್ಕೆ ಬರುತ್ತದೆ? ಒಂದು ವೇಳೆ ಇದು ಇಲ್ಲದ್ದಿದ್ದರೆ ಏನಾಗುತ್ತದೆ? ಮುಂತಾದ ಪ್ರಶ್ನೆಗಳ ಬಗ್ಗೆ ಮಾತನಾಡಿದ ಮೇಲೆ ಮಕ್ಕಳಿಗೆ ವೈಯಕ್ತಿಕವಾಗಿ ಆ ವಸ್ತುವಿನ ವಿವರಣೆಯನ್ನು ತಮ್ಮ ಶಬ್ದಗಳಲ್ಲಿ ಬರೆಯುವಂತೆ ಹೇಳಿ.

**ಲೇಖನಗಳನ್ನು ಪರೀಕ್ಷಿಸುವಾಗ ಮಕ್ಕಳಿಗೆ ಈ ರೀತಿ ಸಹಾಯ ಮಾಡಿ :**

ಒಂದು ಉತ್ತಮವಾದ (ಒಳ್ಳೆಯ) ಲೇಖನದಲ್ಲಿ ಎರಡು ಭಾಗಗಳಿರುತ್ತವೆ. **ವಿಷಯವಸ್ತು** ಮತ್ತು **ಕ್ರಮ ಬದ್ಧತೆ.** ವಿಷಯ ವಸ್ತು ಎಂದರೆ ನೀವು ಯಾವ ವಿಷಯದ ಬಗ್ಗೆ ಬರೆಯಲು ಇಚ್ಛಿಸುತ್ತಿದ್ದೀರೋ ಆ ವಿಷಯಕ್ಕೆ ಸಂಬಂಧಿಸಿದ ವಿಚಾರಗಳನ್ನು ವ್ಯವಸ್ಥಿತವಾಗಿ ಬರೆಯುವುದು: ಕ್ರಮಬದ್ಧತೆ ಎಂದರೆ ನೀವು ಬರೆಯುತ್ತಿರುವುದರಲ್ಲಿ ಅಂದರೆ ಬರವಣಿಗೆಯಲ್ಲಿ ವಾಕ್ಯ ರಚನೆ, ಮತ್ತು ಅಕ್ಷರಗಳ (ಮಾತ್ರೆಗಳ) ಸರಿಯಾದ ಬಳಕೆ ಇತ್ಯಾದಿ. ಯಾವುದೇ ವಿಷಯದ ವಿಷಯ ವಸ್ತುವನ್ನು ಮತ್ತು ಕ್ರಮಬದ್ಧತೆ ಎರಡನ್ನೂ ಪರೀಕ್ಷಿಸುವುದರಿಂದ ಮಕ್ಕಳ ಲೇಖನದ ದಕ್ಷತೆ ಇನ್ನೂ ಉತ್ತಮಗೊಳ್ಳುತ್ತದೆ.

## (vii) ಹೆಚ್ಚುವರಿ ಚಟಿವಟಿಕೆಗಳು:

1. **ಮುಂದಕ್ಕೆ ಹೇಳು:** ಮಕ್ಕಳನ್ನು ಸಣ್ಣ ಗುಂಪಿನಲ್ಲಿ ಕೂರಿಸಿ ಮೊದಲು ಅವರಿಗೆ ಒಂದೊಂದು ವಾಕ್ಯವನ್ನು ಹೇಳುವ ಅಭ್ಯಾಸವನ್ನು ಮಾಡಿಸಿ. ಮಕ್ಕಳು ಮಾಡುವ ಈ ಎಲ್ಲಾ ವಾಕ್ಯಗಳನ್ನು ಜೋಡಿಸಿ ಒಂದು ಕಥೆಯನ್ನು ರಚಿಸಬಹುದು. ನಂತರ ಯಾವುದಾದರು ಮಗುವಿನ ಆ ಕಥೆಯನ್ನು ಪುನಾರಾವರ್ತಿಸಲು ಹೇಳಿ.

ಮಕ್ಕಳಿಗೆ ಆ ಕಥೆಯನ್ನು ಶಬ್ದಗಳಲ್ಲಿ ಬರೆಯಲು ಹೇಳಿ.

·ಈ ಚಟುವಟಿಕೆಯಿಂದ ಮಕ್ಕಳಲ್ಲಿ ಯೋಚಿಸುವ ಶಕ್ತಿ ವಿಕಾಸವಾಗುತ್ತದೆ.

·ಅವರ ಶಬ್ದಗಳನ್ನು ಆಯ್ಕೆ ಮಾಡಲು ಶಕ್ತರಾಗುತ್ತಾರೆ.

·ಕಥೆಯ ಕಾಲವನ್ನು ಮಕ್ಕಳು ನೆನೆಪಿನಲ್ಲಿಟ್ಟುಕೊಳ್ಳಬೇಕು

· ಮುಂದುವರೆದಂತೆ ಯಾವುದೇ ವಿಷಯದ ಬಗ್ಗೆ ಮಕ್ಕಳು ಯಾವುದೇ ಹಿಂಜರಿಕೆ ಸಂಕೋಚವಿಲ್ಲದೆ ಮಾತನಾಡಬಲ್ಲರು.

2. **ಕಥೆಯನ್ನು ಪೂರ್ತಿಮಾಡಿ:**

ಉದ್ದೇಶ: ಸ್ವಯಂ ಲೇಖನದ ಸಾಮರ್ಥ್ಯವನ್ನು ವಿಕಾಸಗೊಳಿಸುವುದು.

ಕಥೆಯ ಪ್ರಾರಂಭ ನಿಮ್ಮಿಂದ ಆಗುತ್ತದೆ ಒಂದು, ಎರಡು ಅಥವಾ ಮೂರು ವಾಕ್ಯಗಳಲ್ಲಿ ನೀವು ಆರಂಭಿಸುವ ಕಥೆಯನ್ನು ಮಕ್ಕಳು ಪೂರ್ಣಗೊಳಿಸಬೇಕು. ಒಂದೊಂದು ಮಗುವೂ ತನ್ನ ಕಲ್ಪನೆಯಿಂದ ಕಥೆಗೆ ವಾಕ್ಯವನ್ನು ಜೋಡಿಸುತ್ತಾ ಹೋಗುತ್ತದೆ ಕಥೆಯ ಆರಂಭ, ಅದರ ಮಧ್ಯ ಭಾಗ ಮತ್ತು ಅಂತ್ಯವನ್ನು ಎಲ್ಲರೂ ಸೇರಿ ಮಾಡಬೇಕು ಎನ್ನುವುದನ್ನು ಮಕ್ಕಳು ಗಮನಿಸಬೇಕಾಗುತ್ತದೆ. ಕಥೆಯ ಕಾಲ ಮತ್ತು ವಿಷಯ ಬೇರೆ ಕಡೆ ಹೋಗಬಾರದು ಎನ್ನುವುದರ ಬಗ್ಗೆ ಎಲ್ಲರೂ ಗಮನ ವಹಿಸಲು ಹಾಗೂ ಯೋಚಿಸಲು ಮಕ್ಕಳನ್ನು ಪ್ರೋತ್ಸಾಹಿಸಿ.

ಕೊನೆಯಲ್ಲಿ ಒಂದು ಮಗುವಿಗೆ ಕಥೆಯನ್ನು ಪುನರಾವರ್ತಿಸುವಂತೆ ಹೇಳಿ ಮಕ್ಕಳು ಕಥೆಯ ಬಗ್ಗೆ ಚರ್ಚಿಸಲಿ.

- ನಾವೆಲ್ಲರೂ ಸೇರಿ ಕಥೆಯ ಕಾಲವನ್ನು ಗಮನದಲ್ಲಿಟ್ಟುಕೊಂಡಿದ್ದೇವೆ?
- ನಮಗೆ ಕಥೆಯನ್ನು ಪೂರ್ತಿಮಾಡಲು ಸಾಧ್ಯವಾಯಿತೇ?
- ಕಥೆ ಮಧ್ಯದಲ್ಲಿ ಎತ್ತೆತ್ತಲೋ ಹೋಯಿತೇ?

- ಕಥೆಯಲ್ಲಿ ಏನಾದರೂ ಅಸಂಬದ್ಧವಾದ, ಸಂಬಂಧ ಪಡದ ಅಂಶವನ್ನು ಸೇರಿಸಿಕೊಂಡಿದ್ದೇವೆಯೇ?
- ಕಥೆ ಯಾವ ಭಾಗದಲ್ಲಿ ಆಸಕ್ತಿ ಪೂರ್ಣವಾಯಿತು?
- ಕಥೆಯಿಂದ ನಾವು ಯಾವ ತೀರ್ಮಾನಕ್ಕೆ ಬಂದಿದ್ದೇವೆ?
- ನಾವೆಲ್ಲರೂ ಸೇರಿ ಈ ಕಥೆಗೆ ಒಂದು ಶೀರ್ಷಿಕೆಯನ್ನು ಕೊಡಬಲ್ಲೆವೆ?
- ಈ ಕಥೆಯನ್ನು ನಮ್ಮ ಶಬ್ದಗಳಲ್ಲಿ ಬರೆಯಲು ನಮಗೆ ಸಾಧ್ಯವಾಗುತ್ತದೆ? ಈ ಎಲ್ಲಾ ಪ್ರಶ್ನೆಗಳ ಬಗ್ಗೆ ಚರ್ಚಿಸಿ.

**3. ಕಥೆ ಬರವಣಿಗೆ :**

**ಈ ಕೆಳಗಿನ ಕಥೆಯನ್ನು ಪೂರ್ಣಗೊಳಿಸಿ ಅದಕ್ಕೆ ಶೀರ್ಷಿಕೆಯನ್ನು ಬರೆಯಿರಿ**

ಒಂದು ಊರಿನಲ್ಲಿ ಇಬ್ಬರು ಅಣ್ಣತಮ್ಮ ಮತ್ತು ಅವರ ತಾಯಿ ______________________________

________________________________________

________________________________________

________________________________________

ಈ ದೃಶ್ಯವನ್ನು ನೋಡಿದ ರಾಣಿಯು ಇವನನ್ನು ನೋಡಿ ಬಿದ್ದು ಬಿದ್ದು ನಗೋಕೆ ಶುರು ಮಾಡುದಳು. ಇದನ್ನು ಗಮನಿಸಿದ ರಾಜ ಸಂತೋಷ ಪಟ್ಟನು. ಮತ್ತು ಮರುದಿನ ಇಬ್ಬರಿಗೂ ಮದುವೆ ಮಾಡಿದನು.

**4. ಚಿತ್ರ ನೋಡಿ ಬರವಣಿಗೆ.**



________________________________________

________________________________________

________________________________________

________________________________________

## (viii) ಕರ್ನಾಟಕದ ಕಿರು ಪರಿಚಯ

**ಕರ್ನಾಟಕದ ಜಿಲ್ಲೆಗಳು, ಕಿರು ಪರಿಚಯ ಮತ್ತು ವಿಶೇಷತೆಗಳು**

ಕಥಾಗುಚ್ಚ–2 ರಲ್ಲಿ ಇವುಗಳ ಬಗ್ಗೆ (ಪುಟ 30 ರಿಂದ 36) ಮಾಹಿತಿ ನೀಡಿದೆ. ಇದಕ್ಕೆ ಅನುಗುಣವಾಗಿ ಅಭ್ಯಾಸ ಪುಸ್ತಕ–2ರಲ್ಲಿ ಚಟುವಟಿಕೆಗಳನ್ನು ನೀಡಿದೆ (ಪುಟ 42 ರಿಂದ 44) **ಕಿರು ಪರಿಚಯ ತಾಲಿಕೆಯಲ್ಲಿ** ಮುಖ್ಯವಾದ ಮಾಹಿತಿಗಳನ್ನು ಮಾತ್ರ ಸಂಗ್ರಹಿಸಿ ನೀಡಿದೆ. ಇದರ ಮುಖ್ಯ ಗುರಿ ಇಡೀ ಕರ್ನಾಟಕದ 30 ಜಿಲ್ಲೆಗಳ ಪರಿಚಯ.

**ಚಟುವಟಿಕೆಗಳು: ವಿದ್ಯಾರ್ಥಿಗಳು ಅವರವರ ಊರು/ತಾಲ್ಲೂಕು/ಜಿಲ್ಲೆಗಳ ಬಗ್ಗೆ ಇತರ ಮಾಹಿತಿ/ವಿಶೇಷತೆಗಳನ್ನು ಗುಂಪಿನಲ್ಲಿ ಸಂವಾದ/ಚರ್ಚೆ/ಬರಹದ ಮೂಲಕ ಹಂಚಿಕೊಳ್ಳಿ.**

- ಭಾರತದ ಭೂಪಟದಲ್ಲಿ ಕರ್ನಾಟಕ ರಾಜ್ಯ ಗುರುತಿಸುವಿಕೆ.
- ಕರ್ನಾಟಕ ರಾಜ್ಯ ಭೂಪಟದಲ್ಲಿ ಪ್ರತಿ ಜಿಲ್ಲೆಯನ್ನೂ ಥಟ್ಟೆಂದು ಗುರುತಿಸುವ ಆಟ.
- ತಾವು ನೋಡಿರುವ ಇತರ ಸ್ಥಳಗಳ ಬಗ್ಗೆ ವಿದ್ಯಾರ್ಥಿಗಳ ಅನುಭವ ಹಂಚಿಕೆ.
- ಪ್ರತಿ ಗುಂಪಿಗೆ ಯಾವುದಾದರೂಂದು ಜಿಲ್ಲೆಯನ್ನು 'ನಿಯೋಜಿತ ಕಾರ್ಯ'ಕ್ಕಾಗಿ ಸೂಚಿಸಿ. ಇದಕ್ಕಾಗಿ ಅಂಕಿ ಅಂಶಗಳು, ಚಿತ್ರ, ಲೇಖನ, ಚಾರ್ಟ್ ಇತ್ಯಾದಿಗಳನ್ನು ಕಲೆಹಾಕಲು ದಿನಪತ್ರಿಕೆ/ವಾರಪತ್ರಿಕೆ/ಪಠ್ಯಪುಸ್ತಕ/ ಅಂತರ್ಜಾಲ ಬಳಸಲು ಅವಕಾಶ.
- ಪ್ರತಿ ಗುಂಪಿನ 'ನಿಯೋಜಿತ ಕಾರ್ಯ'ವನ್ನು ಶಾಲೆಯ ಎಲ್ಲಾ ಮಕ್ಕಳಿಗೂ ಪ್ರದರ್ಶನ ನೀಡುವ ಅವಕಾಶ.
- **'ನಮ್ಮ ಕರ್ನಾಟಕ'** ಶೀರ್ಷಿಕೆಯಡಿಯಲ್ಲಿ ತಂಡಗಳ ನಡುವೆ **'ರಸಪ್ರಶ್ನೆ'** ಸ್ಪರ್ಧೆ.

# (ix) ದಿಕ್ಸೂಚಿ ಆಟ

(ಕೈಪಿಡಿಯ ಹಿಂಬದಿಯ ರಕ್ಷಾಪುಟದಲ್ಲಿ ಚಿತ್ರ ನೋಡಿ)

ದಿಕ್ಕುಗಳನ್ನು ಪರಿಚಯಿಸಲು ಕೆಲವು ಚಟುವಟಿಕೆಗಳನ್ನು ಅಭ್ಯಾಸ ಪುಸ್ತಕ–2 (ಪುಟ38,39) ರಲ್ಲಿ ನೀಡಿದೆ. ಅಭ್ಯಾಸ ಪುಸ್ತಕದಲ್ಲಿರುವಂತೆ ಮೊದಲು ಮಕ್ಕಳಿಗೆ ದಿಕ್ಕುಗಳ ಪರಿಚಯ ಮಾಡಿಸಿ ನಂತರ ಅವುಗಳಿಗೆ ಪೂರಕವಾಗಿ 'ದಿಕ್ಸೂಚಿ ಆಟ' ವನ್ನು ಕೆಳಗೆ ನೀಡಿರುವ 3 ಹಂತಗಳಲ್ಲಿ ಆಡಿಸಿ. ಆಟದ ಜೊತೆಗೆ ದಿಕ್ಸೂಚಿ ಹಾಡನ್ನು(ತಮ್ಮ ಜೋಡಿ ಕೈಗಳಿಂದ ದಿಕ್ಕುಗಳನ್ನು ಸೂಚಿಸುತ್ತಾ - **ಉಪೂದಪ**) ಪದೇ ಪದೇ ಹಾಡಲಿ.

**ನೆನಪಿನಲ್ಲಿಡಿ :ವಿದ್ಯಾರ್ಥಿಯು ಒಂದು ಭೂಪಟದಂತೆ ನಿಂತಾಗ ಮಾತ್ರ ಉಪೂದಪ ದಿಕ್ಕುಗಳು ಗಡಿಯಾರ ಮುಳ್ಳಿನಂತೆ ಚಲಿಸುತ್ತವೆ (Clockwise Direction) ಎಂಬುದನ್ನು ಮನದಟ್ಟು ಮಾಡಿ.**

## ಹಂತ : 1 ಉ ಪೂ ದ ಪ



ಶಿಕ್ಷಕಿ ರೆಡಿ! 1,2,3,4..... 1,2,3,4..... ಹೇಳುತ್ತಾ ಇರಲಿ

ಮಕ್ಕಳು (ಗಡಿಯಾರದ ಮುಳ್ಳಿನಂತೆ) ಎರಡೂ ಕೈ ಜೋಡಿಸಿ ಚಕ್ರಕಾರದಲ್ಲಿ ತಿರುಗುತ್ತಿರಬೇಕು. 1,2,3,4..... 1,2,3,4.....

ಶಿಕ್ಷಕಿ: ದಿಕ್ಕು ಪೂ...ರ್ವ! ತಕ್ಷಣ ಮಕ್ಕಳು ತಮ್ಮಎರಡೂ ಕೈಗಳಿಂದ ಪೂರ್ವ ದಿಕ್ಕಿಗೆ ಸೂಚಿಸಬೇಕು. ತಪ್ಪು ಸೂಚಿಸಿದವರು ಆಟದಿಂದ ಹೊರಗೆ! ಮತ್ತೆ

ಶಿಕ್ಷಕಿ: ರೆಡಿ!1,2,3,4..... 1,2,3,4 ....." ದಿಕ್ಕು ಉತ್ತರ!"

ಮಕ್ಕಳು ಉತ್ತರ ದಿಕ್ಕನ್ನು ಸೂಚಿಸಬೇಕು

## ಹಂತ : 2 ವಾ ಈ ಆ ನೈ




**ಎರಡೂ ಕೈ ಜೋಡಿಸಿ ಮಕ್ಕಳು ವಾ, ಈ, ಆ, ನೈ ದಿಕ್ಕುಗಳನ್ನು ಸೂಚಿಸಲಿ:**

**ವಾಯುವ್ಯ** ----> **ಉತ್ತರ, ಪಶ್ಚಿಮ** (North-West) – ತಲೆಯ ಬಲಕ್ಕೆ

**ಈಶಾನ್ಯ** ----> **ಉತ್ತರ, ಪೂರ್ವ** (North-East) – ತಲೆಯ ಎಡಕ್ಕೆ

**ಆಗ್ನೇಯ** ----> **ದಕ್ಷಿಣ, ಪೂರ್ವ** (South-East) – ಸೊಂಟದ ಕೆಳಗೆ ಎಡಕ್ಕೆ

**ನೈರುತ್ಯ** ----> **ದಕ್ಷಿಣ–ಪಶ್ಚಿಮ** (South-West) – ತಲೆಯ ಎಡಕ್ಕೆ

## ಹಂತ : 3 ವಾ ಉ ಈ ಪೂ, ಆ ದ ನೈ ಪ



ಈಗ ಎಂಟು ದಿಕ್ಕುಗಳನ್ನು ಒಟ್ಟಾಗಿ ಸೇರಿಸಿ ಆಟ ಮುಂದುವರೆಸಿ. ವಾಯುವ್ಯ, ಈಶಾನ್ಯ, ಆಗ್ನೇಯ, ನೈರುತ್ಯ ದಿಕ್ಕುಗಳನ್ನು ಉತ್ತರ, ಪೂರ್ವ, ದಕ್ಷಿಣ, ಪಶ್ಚಿಮದಲ್ಲಿ ಮೊದಲು ಒಂದೊಂದಾಗಿ ಸೇರಿಸಿ, ಅಭ್ಯಾಸ ಮಾಡಿಸಿ, ನಂತರ ಒಟ್ಟಿಗೆ 'ಎಂಟು ದಿಕ್ಸೂಚಿ' ಆಟ ಆಡಿಸಿದರೆ ಮಕ್ಕಳ ಸಂದೇಹ– ಗೊಂದಲಗಳು ದೂರವಾಗುತ್ತವೆ.

ಒಟ್ಟಿಗೆ ಹೇಳಲಿ – **ವಾ ಉ ಈ ಪೂ, ಆ ದ ನೈ ಪ,.** ........

ಶಿಕ್ಷಕಿ ಈಗ ಎಂಟು ದಿಕ್ಕುಗಳನ್ನು ಸೂಚಿಸುತ್ತಾರೋ ಆ ದಿಕ್ಕನ್ನು ತಮ್ಮ ಎರಡೂ ಕೈಗಳಿಂದ ತೋರಿಸಬೇಕು.

# ಚಟುವಟಿಕೆಗಳ ಒಂದು ಪಕ್ಷಿನೋಟ – ಪ್ರತಿ ಮಗುವಿನ ಮಟ್ಟಕ್ಕೆ ಅನುಗುಣವಾಗಿ

| ಮಟ್ಟಗಳು | ಚಟುವಟಿಕೆಗಳು | ಸಾಮಗ್ರಿಗಳು | ಆಟಗಳು | ಅಭ್ಯಾಸಹಾಳೆ |
|---|---|---|---|---|
| **ಪ್ರಾರಂಭಿಕ ಮಟ್ಟ** | ಅಕ್ಷರ ಪರಿಚಯ | ಅಕ್ಷರ ಬಿಲ್ಲೆಗಳು, ಅಕ್ಷರ ರಟ್ಟು, ಚಿತ್ರಪಟ, ಕಥೆಗಳ | **ಗುರುತಿಸು, ಹೊಂದಿಸು, ಜೋಡಿಸು** (ಗು, ಹೊಂ, ಜೋ,) ಆಟ ಹನುಮನ ಬಾಲ, ಚಿತ್ರದಲ್ಲಿ ವಸ್ತು, ಪ್ರಾಣಿ, ಗಿಡ, ಮರಗಳ ಗುರುತಿಸುವಿಕೆ, ಅಕ್ಷರ ಹುಡುಕುವ ಆಟ, ಅಕ್ಷರದ ಮೇಲೆ ನೆಗೆಯುವ ಆಟ, ಹುಡುಕುವ ಆಟ, ನನ್ನ ಅಕ್ಷರ ಹುಬುಟ್ಟಿಯ ಆಟ ಇತ್ಯಾದಿ | ಸರಳ ಕನ್ನಡ ಅಭ್ಯಾಸ ಪುಸ್ತಕ–1 1 ರಿಂದ 14 ಮತ್ತು 40 |
| **ಅಕ್ಷರ ಮಟ್ಟ** | ಸರಳಾಕ್ಷರಗಳ ಪರಿಚಯ, ಪದ ರಚನೆ, ಸರಳ ಕನ್ನಡ ಭಾಗ– 1 ರಿಂದ ಸರಳಾಕ್ಷರ ಓದು–ಬರಹ | ಸರಳ ಕನ್ನಡ ಭಾಗ–1, ಅಕ್ಷರ ರಟ್ಟು, ಅಭ್ಯಾಸ ಪುಸ್ತಕ–1, ಚಿತ್ರಪಟ | ಜೋಡಿಪದ ಆಟ, ಶಬ್ದಾಂತ್ಯಾಕ್ಷರಿ, ಪದ ಓದುವ ಆಟ, ಆಲಿಸಿ ಬರೆಯುವ ಆಟ, ಅಕ್ಷರದಿಂದ ಪದರಚನೆಯಾಟ (ಮೈಂಡ್ ಮ್ಯಾಪ್), ಪದಗಳನ್ನು ಪಟ್ಟಿ ಮಾಡುವ ಆಟ ಇತ್ಯಾದಿ | ಅಭ್ಯಾಸ ಪುಸ್ತಕ–1, 5, 6, 7, 8, 11, 12, ಮತ್ತು 15 ರಿಂದ 39 |
| **ಪದ ಮಟ್ಟ** | ಗುಣಿತಾಕ್ಷರಗಳ ಪರಿಚಯ, ಕಥೆಗಳಲ್ಲಿ ಗುಣಿತಾಕ್ಷರಗಳ ಗುರುತಿಸುವಿಕೆ, ಗುಣಿತಾಕ್ಷರ ರಟ್ಟಿನಲ್ಲಿ ಪದ ರಚನೆ, ವಾಕ್ಯರಚನೆ, ವಾಕ್ಯರಚನೆ, ಸಜಾತಿ ವಿಜಾತಿ ಒತ್ತಕ್ಷರಗಳ ಪರಿಚಯ | ಸರಳ ಕನ್ನಡ ಭಾಗ–1 ಅಕ್ಷರ ರಟ್ಟು, ಅಭ್ಯಾಸ ಪುಸ್ತಕ–1, ಚಿತ್ರಪಟ, ಸರಳ ಕನ್ನಡ ಭಾಗ –2 ಅಭ್ಯಾಸ ಪುಸ್ತಕ–2 | ತಪ್ಪು ಸರಿಪಡಿಸುವ ಆಟ, ವಚನ ಬದಲಿಸುವ ಆಟ, ಸ್ಮರಣಶಕ್ತಿ ಆಟ, ಬಿಡಿಸಿ ಬರೆಯುವ ಆಟ, ಗುಣಿತಾಕ್ಷರ ರಟ್ಟಿನಲ್ಲಿ ಪದ ರಚನೆಯಾಟ, ಮೈಂಡ್ ಮ್ಯಾಪ್, ವಾಕ್ಯ ರಚನೆ ಆಟ, ಅಪೂರ್ಣ ವಾಕ್ಯವನ್ನು ಪೂರ್ಣಗೊಳಿಸುವ ಆಟ, ಶಬ್ದಕ್ಕೆ ಸಂಬಂಧಿಸಿದ ಪದ ರಚನೆ ಆಟ, ವರ್ಣಿಸುವ ಆಟ ಇತ್ಯಾದಿ | ಅಭ್ಯಾಸ ಪುಸ್ತಕ–1, ಆಯ್ದ ಪುಟಗಳು ಅಭ್ಯಾಸ ಪುಸ್ತಕ–2ರ 1 ರಿಂದ 48 |
| **ಪ್ಯಾರ & ಕಥೆ ಮಟ್ಟ** | ಕಥಾ ವಾಚನ–ಸಜಾತಿ, ವಿಜಾತಿ ಒತ್ತಕ್ಷರ ಕಥೆಗಳು ಹಾಗೂ ವಿಶೇಷ ಕಥೆಗಳೊಂದಿಗೆ ಅರ್ಥೈಸುವಿಕೆ, ಕಥೆ, ಪದ್ಯ, ಪ್ರಾಸ, ವಾಚನ ಇತ್ಯಾದಿ | ಸರಳ ಕನ್ನಡ ಭಾಗ –2 ಅಭ್ಯಾಸ ಪುಸ್ತಕ–2 ಚಿತ್ರಪಟ | ಮೈಂಡ್ ಮ್ಯಾಪ್, ಮುಂದಕ್ಕೆ ಹೇಳು, ಮಧ್ಯದ ಕಥೆ ಬರೆ, ಪಾತ್ರಾಭಿನಯ (Role play) ಪ್ರಶ್ನೋತ್ತರ ಆಟ, ಪದ, ವಾಕ್ಯಗಳಿಂದ ಪದ ರಚನೆ, ವರ್ಣಿಸುವ ಆಟ, ಅಪೂರ್ಣ ವಾಕ್ಯವನ್ನು ಪೂರ್ಣಗೊಳಿಸುವ ಆಟ ಇತ್ಯಾದಿ | ಅಭ್ಯಾಸ ಪುಸ್ತಕ 2ರ 1 ರಿಂದ 48 ಆಯ್ದ ಹಾಳೆಗಳನ್ನು ಮಕ್ಕಳ ಕಲಿಕಾ ಮಟ್ಟಕ್ಕನುಗುಣವಾಗಿ ಬಳಸಿ |
| **ಮುಂದುವರಿದ ಮಕ್ಕಳಿಗೆ ಹೆಚ್ಚುವರಿ ಚಟುವಟಿಕೆ** | ವಿಶೇಷ ಕಥೆಗಳೊಂದಿಗೆ ಅರ್ಥೈಸುವಿಕೆ, ವಿಶೇಷ ಪದ್ಯ, ಪ್ರಾಸ, ವಾಚನ, ನಾಟಕ, ಪೂರ್ವ ಜ್ಞಾನವನ್ನು ಕಥೆ ಮತ್ತು ಚಿತ್ರ ಪಟದ ಜೊತೆ ಸಂಬಂಧ ಕಲ್ಪಿಸುವುದು – ಬರವಣಿಗೆ | ಸರಳ ಕನ್ನಡ ಭಾಗ –2 ಅಭ್ಯಾಸ ಪುಸ್ತಕ–2 ಚಿತ್ರಪಟ ಇತರ ಸಾಮಾಗ್ರಿಗಳು | ಸ್ಮರಣಶಕ್ತಿ ಆಟ, ಮೈಂಡ್ ಮ್ಯಾಪ್, ಮುಂದಕ್ಕೆ ಹೇಳು, ಮಧ್ಯದ ಕಥೆ ಬರೆ, ಪಾತ್ರಾಭಿನಯ (Role play) ಪ್ರಶ್ನೋತ್ತರ ಆಟ, ಪದ, ವಾಕ್ಯಗಳಿಂದ ಪದ ರಚನೆ ಇತ್ಯಾದಿ | ಅಭ್ಯಾಸ ಪುಸ್ತಕ–2ರ ಆಯ್ದ ಅಭ್ಯಾಸ ಹಾಳೆ ತರಗತಿ ಪಠ್ಯಪುಸ್ತಕ, ಗ್ರಂಥಾಲಯ ಪುಸ್ತಕಗಳು ಪತ್ರಿಕೆಗಳು.... ಇತ್ಯಾದಿ |

**ಬರವಣಿಗೆ : ಬರವಣಿಗೆಯನ್ನು ಎಲ್ಲಾ ಹಂತದ ಮಕ್ಕಳಿಗೆ ಕಲಿಕಾ ಮಟ್ಟಕ್ಕೆ ಅನುಗುಣವಾಗಿ ಅಭ್ಯಾಸ ಪುಸ್ತಕ ಮತ್ತು ಕಪ್ಪು ಹಲಗೆಯಲ್ಲಿ ನೀಡಲಾಗುವುದು.**